# ಜನತಾ ವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಸೆಪ್ಟೆಂಬರ್ 06, 2024

ಸಂಪುಟ : 51 ಸಂಚಿಕೆ : 115 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ದಾವಣಗೆರೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಗುರುವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಶಾಲಾ ಕೊಠಡಿಯಾಚೆಗಿನ ಸಮಾಜಕ್ಕೂ ಶಿಕ್ಷಕರ ಕೊಡುಗೆ ಅಗತ್ಯ

### ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನ, ಶಿಕ್ಷಕರ ದಿನಾಚರಣೆ, ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಸೆ. 5- ಶಿಕ್ಷಕರು ಕೇವಲ ಶಾಲಾ ಕೊಠಡಿಯೊಳಗಿನ ಪಾಠಗಳಿಗೆ ಸೀಮಿತರಲ್ಲ. ಕೊಠಡೆಯಾಚೆಗಿನ ಸಮಾಜಕ್ಕೂ ತಾವೇನು ಕೊಡುಗೆ ನೀಡಬಹುದು ಎಂಬುದನ್ನು ಶಿಕ್ಷಕರು ಚಿಂತಿಸಬೇಕು ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಗುರುವಾರ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಹಾಗೂ ದಾವಣಗೆರೆ ಉತ್ತರ ವಲಯ, ದಕ್ಷಿಣ ವಲಯದ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿತ್ರಿ ಬಾಯಿ ಫುಲೆ, ಡಾ. ಅಬ್ದುಲ್ ಕಲಾಂ, ಡಾ.ವರ್ಗೀಸ್ ಕುರಿಯನ್, ಕಿರಣ್ ಬೇಡಿ ಸೇರಿದಂತೆ ಅನೇಕರು ತಮ್ಮ ಶಿಕ್ಷಕ ವೃತ್ತಿ ಜೊತೆಯಲ್ಲಿಯೇ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಹಾಗೆಯೇ ಇಂದಿನ ಶಿಕ್ಷಕರೂ ಸಹ ತಮ್ಮ ವೃತ್ತಿ ಜೊತೆ ಸಮಾಜಕ್ಕೆ ಕೊಡುಗೆ ನೀಡುವ ಅಗತ್ಯವಿದೆ ಎಂದರು.

> **ಕಳೆದ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ ಜಿಲ್ಲೆ 23ನೇ ಸ್ಥಾನದಲ್ಲಿದ್ದು, ಈ ಬಾರಿ 5ನೇ ಸ್ಥಾನದೊಳಗೆ ತರಲು ಶಿಕ್ಷಕರು ಹಾಗೂ ಆಡಳಿತ ಸಂಸ್ಥೆಗಳು ಶ್ರಮಿಸಬೇಕು. ಇದು ನಮ್ಮ ಬೇಡಿಕೆಯೂ ಹೌದು, ಆದೇಶವೂ ಹೌದು.**
>
> **- ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾಧಿಕಾರಿ**

ಮಕ್ಕಳು ಈಗ ಗ್ರಂಥಾಲಯಗಳಿಗೆ ಹೋಗುತ್ತಿಲ್ಲ. ಮೊಬೈಲ್ ಫೋನ್‌ಗಳಲ್ಲಿಯೇ ಬೇಕಾದ ಮಾಹಿತಿ ಪಡೆಯುತ್ತಿದ್ದಾರೆ. ಶಿಕ್ಷಕರು ಮಕ್ಕಳಿಗೆ ಪುಸ್ತಕ, ದಿನ ಪತ್ರಿಕೆಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ ಮೊದಲಾದ ಚಟುವಟಿಕೆಯಲ್ಲಿ ಮಕ್ಕಳನ್ನು ತೊಡಗಿಸಬೇಕಿದೆ ಎಂದರು.

ಇಂದಿನ ಮಕ್ಕಳು ಸಾಕಷ್ಟು ಬುದ್ದಿವಂತರಿದ್ದಾರೆ, ಅವರಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ. ಬಡತನ, ಏಕ ಪೋಷಕತ್ವ ಮಕ್ಕಳನ್ನು ಪ್ರೋತ್ಸಾಹಿಸುವುದು, ಮಕ್ಕಳಲ್ಲಿರುವ ಪ್ರತಿಭೆ ಗುರುತಿಸುವುದು ಶಿಕ್ಷಕರಿಂದ ಮಾತ್ರ ಸಾಧ್ಯವಿದೆ. ಆ ದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲೆ ಇದೆ ಎಂದು ಹೇಳಿದರು. (2ನೇ ಪುಟಕ್ಕೆ)

### ಶಿಕ್ಷಕರೇ ದೇವರು: ಡಿಸಿ

**ನಾನು ನಾಲ್ಕು ವರ್ಷ ಶಿಕ್ಷಕನಾಗಿದ್ದೆ. ಚೆನ್ನಾಗಿ ಭಾಷಣ ಮಾಡಬಲ್ಲೆ. ಆದರೆ ಎಲ್ಲೂ ಹೆಚ್ಚು ಮಾತನಾಡುವುದಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು. ಉಪನಿಷತ್‌ನ ಶ್ಲೋಕ ಹಾಗೂ ಕಾಳಿದಾಸ ಅವರು ತಮ್ಮ ಗ್ರಂಥ ಹಾಗೂ ಕಾವ್ಯಗಳಲ್ಲಿ ಮೊದಲು ಬಳಸಿದ ಗುರುವಿನ ಕುರಿತ ಸಾಲುಗಳನ್ನು ಉಲ್ಲೇಖಿಸಿದ ಜಿಲ್ಲಾಧಿಕಾರಿ, ಹಿಂದಿನಿಂದಲೂ ಗುರುವಿಗೆ ಗೌರವ ನೀಡಲಾಗಿದೆ ಎಂದು ಹೇಳಿದರು. ಗುರುಗಳನ್ನು ನೋಡಬಹುದು. ಆದರೆ ದೇವರನ್ನು ನೋಡಲು ಸಾಧ್ಯವಿಲ್ಲ. ಹೀಗಾಗಿ ಶಿಕ್ಷಕರೇ ದೇವರು ಎಂದರು.**

## ಫುಡ್ ಕಿಟ್ ಇಲ್ಲ

### ಅನ್ನಭಾಗ್ಯ : ಹಳೆಯ ಪದ್ಧತಿಯನ್ನೇ ಮುಂದುವರಿಸಲು ಸಂಪುಟ ತೀರ್ಮಾನ

ಬೆಂಗಳೂರು, ಸೆ.5- ಬಡತನದ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಡಿ ಹಾಲಿ ಇರುವ ಪದ್ಧತಿಯನ್ನು ಮುಂದುವರೆಸಲು ನಿರ್ಧಾರ ಕೈಗೊಂಡಿರುವ ರಾಜ್ಯ ಸಚಿವ ಸಂಪುಟ ಸದ್ಯಕ್ಕೆ ಫುಡ್‌ಕಿಟ್ ನೀಡುವ ಯೋಜನೆಯನ್ನು ಕೈ ಬಿಟ್ಟಿದೆ.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ಅಕ್ಟೋಬರ್ ತಿಂಗಳಿನಿಂದ ಹೆಚ್ಚುವರಿ 5 ಕೆಜಿ ಅಕ್ಕಿ ಬದಲು 170 ರೂ. ನೀಡುವುದನ್ನು ಸ್ಥಗಿತಗೊಳಿಸಿ ಫುಡ್ ಕಿಟ್ ನೀಡಲು ಸಂಪುಟಕ್ಕೆ ಶಿಫಾರಸ್ಸು ಮಾಡಿತ್ತು.

ಈ ಯೋಜನೆ ಅನುಷ್ಠಾನಗೊಳಿಸುವ ಸಂಬಂಧ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು, ಹಾಲಿ ಪದ್ಧತಿಯನ್ನೇ ಮುಂದುವರೆಸುವ ತೀರ್ಮಾನ ಕೈಗೊಂಡಿದೆ.

ಈಗ ಕೇಂದ್ರ ಸರ್ಕಾರ ಪ್ರತಿ ಕೆಜಿಗೆ 28 ರೂ.ನಂತೆ ಎಷ್ಟು ಅಕ್ಕಿ ಬೇಕಿದ್ದರೂ ನೀಡುತ್ತೇವೆಂದು ಹೇಳಿಕೆ ನೀಡಿದ ಬೆನ್ನಲ್ಲೇ ರಾಜ್ಯ ಸರ್ಕಾರ ಅಕ್ಕಿಯ ಬದಲು 170 ರೂ. ಮೌಲ್ಯದ ಅಗತ್ಯ ಸಾಮಗ್ರಿಗಳ ಕಿಟ್ ನೀಡಲು ಉದ್ದೇಶಿಸಿತ್ತು.

ರಾಜ್ಯದ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಬಿ' ಮತ್ತು 'ಸಿ' ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಅನ್ವಯವಾಗುವಂತೆ ಮೂರು ವರ್ಷ ಹೆಚ್ಚಿಸಲಾಗಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲಾ-ಕಾಲೇಜುಗಳಿಗೆ ಮೂಲಸೌಕರ್ಯ ಕಲ್ಪಿಸಲು 18.54 ಕೋಟಿ ರೂ. ಅಂದಾಜು ಮೊತ್ತಕ್ಕೆ (2ನೇ ಪುಟಕ್ಕೆ)

### ದೇವನಹಳ್ಳಿ ಬಳಿ ಹೊಸ ಕಾರಾಗೃಹ

**ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಒತ್ತಡ ಹೆಚ್ಚಿರುವ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಸಮೀಪ 600 ಬಂಧಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹ ನಿರ್ಮಿಸಲು ಸಂಪುಟ ತೀರ್ಮಾನಿಸಿದೆ. ವಸತಿಯೇತರ ಕಟ್ಟಡ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗಾಗಿ 100 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಹೊಸ ಕಾರಾಗೃಹ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.**

## ಹಿಜಾಬ್ ವಿವಾದ : ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ತಡೆ

ಬೆಂಗಳೂರು, ಸೆ. 5 - ಹಿಜಾಬ್ ವಿವಾದದ ಕಾರಣದಿಂದಾಗಿ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಿಗೆ ನೀಡಲಾಗಿದ್ದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ತಡೆಯಲಾಗಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಉಡುಪಿಯ ಕುಂದಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಿ.ಜಿ. ರಾಮಕೃಷ್ಣ ಅವರನ್ನು ಈ ಬಾರಿಯ ಶಿಕ್ಷಕರ ದಿನಾಚರಣೆಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಆದರೆ ಮುಸ್ಲಿಂ ಸಮುದಾಯದ ಕೆಲ ಕಾರ್ಯಕರ್ತರು ಈ ಪ್ರಶಸ್ತಿ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ನಂತರ ಪ್ರಶಸ್ತಿಯನ್ನು ತಡೆಯಲಾಗಿದೆ. ಹಿಜಾಬ್ ವಿವಾದ ಭುಗಿಲೆದ್ದ ಸಮಯದಲ್ಲಿ ರಾಮಕೃಷ್ಣ ಅವರು ತೆಗೆದುಕೊಂಡ ನಿಲುವಿನ ಬಗ್ಗೆ ಮುಸ್ಲಿಂ ಸಮುದಾಯದ ಹಲವರು ಆಕ್ರೋಶ ಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಮಾತನಾಡಿರುವ ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಭರತ್ ಶೆಟ್ಟಿ, ಜಿಹಾದಿ ಶಕ್ತಿಗಳ ಒತ್ತಡಕ್ಕೆ ಮಣಿಯುವ ಮೂಲಕ ಸರ್ಕಾರ ಶಿಕ್ಷಕರೊಬ್ಬರನ್ನು ಅವಮಾನಿಸಿದೆ ಎಂದಿದ್ದಾರೆ. ಶಿಕ್ಷಕರು ಒಬ್ಬ ಸರ್ಕಾರಿ ಸೇವಕರಾಗಿ ಅಧಿಕೃತ ಆದೇಶವನ್ನು ಪಾಲಿಸಿದ್ದಾರೆ. ಹೀಗಿದ್ದರೂ ಸರ್ಕಾರ ತಾನೇ ಪ್ರಶಸ್ತಿಯನ್ನು ಪ್ರಕಟಿಸಿ ಜಿಹಾದಿ ಶಕ್ತಿಗಳ ಒತ್ತಾಯದಿಂದ ಪ್ರಶಸ್ತಿ ವಾಪಸ್ ಪಡೆದಿದೆ ಎಂದು ಟೀಕಿಸಿದ್ದಾರೆ.

## ವೀರಶೈವ ಸಭಾದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಮತ್ತೊಂದು ಅವಧಿಗಾಗಿ ಎಸ್ಸೆಸ್ ನಾಮಪತ್ರ



ಬೆಂಗಳೂರು, ಸೆ.5- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಮತ್ತೊಂದು ಅವಧಿಗೆ ಆಯ್ಕೆ ಬಯಸಿ ಇಂದು ನಾಮಪತ್ರ ಸಲ್ಲಿಸಿದರು.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಇದೇ ದಿನಾಂಕ 29ರಂದು ಚುನಾವಣೆ ನಡೆಯಲಿದ್ದು, ನಿವೃತ್ತ ಹಿರಿಯ ಐಎಎಸ್ ಅಧಿಕಾರಿಯೂ ಆಗಿರುವ ಮುಖ್ಯ ಚುನಾವಣಾಧಿಕಾರಿ ಎಂ.ಬಿ. ದ್ಯಾಬೇರಿ ಅವರಿಗೆ ಎಸ್ಸೆಸ್ ತಮ್ಮ ಉಮೇದುವಾರಿಕೆ ಅರ್ಜಿ ನೀಡಿದರು.

ನಾಮಪತ್ರ ಸಲ್ಲಿಕೆಗೆ ಇದೇ ದಿನಾಂಕ 11 ಕೊನೆಯ ದಿನವಾಗಿದ್ದು, ದಿನಾಂಕ 12 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ.

ಉಮೇದುವಾರಿಕೆ ಅರ್ಜಿ ವಾಪಸ್ ಪಡೆಯಲು ದಿನಾಂಕ 15ರವರೆಗೆ ಕಾಲಾವಕಾಶವಿದೆ ಎಂದು ಮುಖ್ಯ ಚುನಾವಣಾಧಿಕಾರಿ ದ್ಯಾಬೇರಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಹಾಸಭಾದ ರಾಜ್ಯ ಘಟಕದ ನೂತನ ಅಧ್ಯಕ್ಷ ಶಂಕರ್ ಬಿದರಿ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಎಂ.ಎನ್.ರಾಜಶೇಖರಪ್ಪ, ಬಿ.ಎಸ್. ಸಚ್ಚಿದಾನಂದಮೂರ್ತಿ, ಹೆಚ್.ಎಂ.ರೇಣುಕ ಪ್ರಸನ್ನ, ಚಿದಾನಂದ ಎಸ್.ಮಠದ, ಕೋರಿ ವಿರುಪಾಕ್ಷಪ್ಪ, ಗಂಗಮ್ಮ ಬಸವರಾಜು, ಚಂದ್ರಕಲಾ ಶ್ರೀಕಂಠರಾಧ್ಯ, ರೂಪಶೇಖರ ಇತರರು ಉಪಸ್ಥಿತರಿದ್ದರು.

## ಸಾಹಿತ್ಯ ಪರಿಷತ್ ಭವನದಲ್ಲಿ ರಂಗನಾಥ್ ಹೆಸರು ಉಳಿಯಲಿ: ತರಳಬಾಳು ಶ್ರೀಗಳು



ದಾವಣಗೆರೆ, ಸೆ. 5 - ಶಿಕ್ಷಣ ತಜ್ಞ, ಸಾಹಿತಿ ಪ್ರೊ. ಎಸ್.ಬಿ. ರಂಗನಾಥ್ ಅವರ ಪರಿಶ್ರಮದಿಂದಾಗಿ ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಭವನ ನಿರ್ಮಾಣವಾಗಿದೆ. ಭವನದಲ್ಲಿ ಅವರ ಹೆಸರು ಉಳಿಯುವಂತೆ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಪ್ರೊ. ಎಸ್.ಬಿ. ರಂಗನಾಥ್ ಸಿದ್ದನಮಠ ಅವರಿಗೆ ನುಡಿ ನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕನ್ನಡ ಭವನ ನಿರ್ಮಾಣಕ್ಕೆ ಜಾಗ ಪಡೆಯಲು ಹಾಗೂ ಕಟ್ಟಡ ನಿರ್ಮಿಸಲು ರಂಗನಾಥ್ ಶ್ರಮ ಅಪಾರ. ಕನ್ನಡ ಸೇವೆ ಅವರ ಮುಖ್ಯ ಆಶಯವಾಗಿತ್ತು. ಅವರ ಹೆಸರು ಕನ್ನಡ ಭವನದಲ್ಲಿ ಇರಬೇಕು. ಇದಕ್ಕಾಗಿ ಸಂಬಂಧಿಸಿದವರು ಕ್ರಮಕ್ಕೆ ಮುಂದಾಗಬೇಕು ಎಂದು ಹೇಳಿದರು.

ರಂಗನಾಥ್ ಅವರು ಶಿಕ್ಷಕರಿಗೆ ಆದರ್ಶವಾಗಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ನಿರಂತರ ಸೇವೆ ಸಲ್ಲಿಸಿದ್ದಾರೆ. ಯೋಗಾಯೋಗ ಎಂಬಂತೆ ಶಿಕ್ಷಕರ ದಿನಾಚರಣೆ ದಿನದಂದೇ ಅವರ ನುಡಿ ನಮನ ಕಾರ್ಯಕ್ರಮ ಆಯೋಜನೆಗೊಂಡಿದೆ ಎಂದರು.

ಅವರು ಶಿಕ್ಷಣ, ಸಾಹಿತ್ಯ, ಸಾಮಾಜಿಕ ಕ್ಷೇತ್ರ ಹಾಗೂ ತರಳಬಾಳು ಮಠದ ಅಭಿವೃದ್ಧಿ ಹೀಗೆ ಹಲವು ವಲಯಗಳಲ್ಲಿ ಸೇವೆ ಸಲ್ಲಿಸಿದ್ದರು. ಅವರು ಮಠದ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರಾಗಿ ಸೇರ್ಪಡೆಯಾಗಿದ್ದರು. ನಂತರ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ, ಆನಂತರ ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಂತಹ ಹುದ್ದೆಗಳಿಗೂ ತಲುಪಿದ್ದರು ಎಂದು ಶ್ರೀಗಳು ಹೇಳಿದರು.

ಶಿಕ್ಷಣ ತಜ್ಞ ಹೆಚ್.ವಿ. ವಾಮದೇವಪ್ಪ ಮಾತನಾಡಿ, ರಂಗನಾಥ್ ಅವರು ಸಹೃದಯಿ, ಸಜ್ಜನ ಹಾಗೂ ಮಿತಭಾಷಿಯಾಗಿದ್ದರು. ಬಡ ಮಕ್ಕಳಿಗೆ ನೆರವಾಗುವುದರಲ್ಲಿ ಮುಂದಿರುತ್ತಿದ್ದರು ಎಂದರು.

ಪತ್ರಕರ್ತ, ಕಲಾವಿದ ಹಾಗೂ ಕ್ರೀಡಾಪಟುವಾಗಿಯೂ ರಂಗನಾಥ್ ಗುರುತಿಸಿಕೊಂಡಿದ್ದರು. ನಾನು ಮಠದ ನಿಷ್ಠಾವಂತ ಸೇವಕ ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದರು ಎಂದು ವಾಮದೇವಪ್ಪ ಹೇಳಿದರು.

ನಿವೃತ್ತ ಪ್ರಾಚಾರ್ಯ (2ನೇ ಪುಟಕ್ಕೆ)

## ಬಾಲ್ಯ ವಿವಾಹ ಅಪರಾಧ, ಗಂಡಿಗೆ 21, ಹೆಣ್ಣಿಗೆ 18 ವರ್ಷ ನಂತರವೇ ಮದುವೆ

ದಾವಣಗೆರೆ, ಸೆ.5- ಬಾಲ್ಯವಿವಾಹ ತಡೆಗಟ್ಟುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಬಾಲ್ಯವಿವಾಹವು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ. ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ತಿದ್ದುಪಡಿ ಪ್ರಕಾರ 18 ವರ್ಷದೊಳಗಿನ ಯಾವುದೇ ಹೆಣ್ಣು ಮಗುವಿಗೆ ಹಾಗೂ 21 ವರ್ಷದೊಳಗಿನ ಯಾವುದೇ ಗಂಡು ಮಗುವಿಗೆ ಮದುವೆಯಾದಲ್ಲಿ ಅದನ್ನು ಬಾಲ್ಯವಿವಾಹವೆಂದು ಪರಿಗಣಿಸಲಾಗಿರುತ್ತದೆ.

ಬಾಲ್ಯವಿವಾಹ ನಡೆದಲ್ಲಿ ಕೇವಲ ವಿವಾಹವಾಗುವ ವಯಸ್ಕನಿಗೆ ಹಾಗೂ ಬಾಲಕಿಯ ತಂದೆ, ತಾಯಿ ಹಾಗೂ ಸಂಬಂಧಿಕರು, ಬಾಲ್ಯವಿವಾಹಕ್ಕೆ ಉತ್ತೇಜನ ನೀಡಿದವರು, ತಡೆಯಲು ವಿಫಲರಾದವರು ಮತ್ತು ಭಾಗವಹಿಸಿದವರು ಎಲ್ಲರೂ ಅಪರಾಧಿಗಳೇ ಆಗುತ್ತಾರೆ. ತಪ್ಪಿತಸ್ಥರಿಗೆ 1 ವರ್ಷದಿಂದ ಗರಿಷ್ಠ-2 ವರ್ಷಗಳವರೆಗೆ ಕಾರಾಗೃಹ ಮತ್ತು 1 ಲಕ್ಷಗಳವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದು.

ಏಪ್ರಿಲ್-2024 ರಿಂದ ಆಗಸ್ಟ್-2024ರವರೆಗೆ ಜಿಲ್ಲೆಯಲ್ಲಿ ಒಟ್ಟು 35 ದಾಖಲಾದ ಬಾಲ್ಯವಿವಾಹ ಪ್ರಕರಣಗಳಲ್ಲಿ 32 ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದೆ. ಅದರಲ್ಲಿ 3 ಬಾಲ್ಯವಿವಾಹಗಳು ನಡೆದಿದ್ದು, ತಪ್ಪಿತಸ್ಥರ ಮೇಲೆ ಎಫ್.ಐ.ಆರ್ ಪ್ರಕರಣಗಳು ದಾಖಲಿಸಲಾಗಿದೆ ಹಾಗೂ 2 ಪ್ರಕರಣಗಳಲ್ಲಿ ನ್ಯಾಯಾಲಯದ ಮುಖಾಂತರ ತಡೆಯಾಜ್ಞೆ ಆದೇಶದ ಮೂಲಕ ಬಾಲ್ಯವಿವಾಹ ತಡೆಗಟ್ಟಲಾಗಿದೆ.

ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮದ ಕುರಿತು ಜಿಲ್ಲಾಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಅರಿವು ಕಾರ್ಯಕ್ರಮ ಹಾಗೂ ಶಾಲಾ ಮತ್ತು ಕಾಲೇಜುಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸಲಾಗುತ್ತಿದೆ.

ಬಾಲ್ಯವಿವಾಹ ಮುಕ್ತ (2ನೇ ಪುಟಕ್ಕೆ)

## 17ರ ಬಾಲಕಿ ತಾಯಿಯಾಗಲು ಅನುಮತಿ

ಮುಂಬೈ, ಸೆ. 6 - 17 ವರ್ಷದ ಬಾಲಕಿ ಗರ್ಭಿಣಿಯಾಗಿ ಮುಂದುವರೆ ಯಲು ಬಾಂಬೆ ಹೈಕೋರ್ಟ್ ಅನುಮತಿ ನೀಡಿದ್ದು, ಮಗುವಿಗೆ ಜನ್ಮ ನೀಡುವುದು ತಾಯಿಯ ಆಯ್ಕೆಗೆ ಬಿಟ್ಟದ್ದು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಗಡ್ಕರಿ ಹಾಗೂ ನೀಲಾ ಗೋಖಲೆ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. ಜ್ವರದ ಕಾರಣಕ್ಕಾಗಿ ಬಾಲಕಿಯನ್ನು ತಪಾಸಣೆಗೆ ಕರೆದೊಯ್ದ ಸಂದರ್ಭದಲ್ಲಿ, ಅವರು 26 ವಾರಗಳ ಗರ್ಭಿಣಿಯಾಗಿರುವುದು ಕಂಡುಬಂದಿತ್ತು. ನಂತರ 22 ವರ್ಷದ ಯುವಕನೋರ್ವ ಬಾಲಕಿಯನ್ನು ಲೈಂಗಿಕವಾಗಿ ಪೀಡಿಸಿದ್ದಾನೆ ಎಂದು ದೂರು ದಾಖಲಿಸಲಾಗಿತ್ತು. ನಂತರ ಗರ್ಭಪಾತಕ್ಕಾಗಿ ಬಾಲಕಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಗರ್ಭಪಾತಕ್ಕೆ ಹೈಕೋರ್ಟ್ (2ನೇ ಪುಟಕ್ಕೆ)

## ಶಿಕ್ಷಕರು ನಿರಂತರ ಕಲಿಕೆಯ ವಿದ್ಯಾರ್ಥಿಯಾಗಿರಬೇಕು

ಜಗಳೂರು, ಸೆ. 5- ಶಿಕ್ಷಕರು ನಿರಂತರ ಕಲಿಕೆಯ ವಿದ್ಯಾರ್ಥಿಯಾಗಿರಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ 136ನೇ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಗ್ಧ ಮನಸ್ಸಿನ ಖಾಲಿ ಕೊಡದಂತಿರುವ ಮಕ್ಕಳಲ್ಲಿ ಶಿಕ್ಷಕರು ಉತ್ತಮ ಅಂಶಗಳನ್ನು ಭರಿಸಬೇಕು. ಶಿಕ್ಷಕರು ಜೀವಂತ ವ್ಯಕ್ತಿಗಳನ್ನು ಸುಂದರ ಮೂರ್ತಿಯನ್ನಾಗಿಸುವ ಶಿಲ್ಪಿಗಳು. ಒಬ್ಬ ವ್ಯಕ್ತಿಯ ಸೃಷ್ಟಿ, ಸ್ಥಿತಿ, ಲಯ ಶಿಕ್ಷಕರ ಕೈಯ್ಯಲ್ಲಿದೆ ಎಂದು ಹೇಳಿದರು.

ಸಮಾಜದಲ್ಲಿ ವ್ಯಕ್ತಿಯು ಒಳಿತು, ಪ್ರಮಾದಗಳಲ್ಲಿ ತೊಡಗಿದಾಗ ಹೊಗಳಿಕೆ, ತೆಗಳಿಕೆಗೆ ಶಿಕ್ಷಕರೇ ಹೊಣೆಯಾಗುತ್ತಾರೆ. ಭವಿಷ್ಯದಲ್ಲಿ ದೇಶದ ನಿರ್ಮಾತೃಗಳನ್ನು ಸೃಷ್ಟಿಸುವ ಶಿಕ್ಷಕ ವರ್ಗ ಸನ್ಮಾರ್ಗದಲ್ಲಿ ನಡೆಯಬೇಕಿದೆ ಎಂದು ಹೇಳಿದರು.

**ಎಸ್.ಎಸ್.ಎಲ್.ಸಿ ಫಲಿತಾಂಶಕ್ಕೆ ಆದ್ಯತೆ ನೀಡಿ :** ಶಿಕ್ಷಕರು ಕಳೆದ ವರ್ಷದ ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿತವನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಉತ್ತಮ ಫಲಿತಾಂಶ ಬರುವಂತೆ ಶ್ರಮ ವಹಿಸಬೇಕಿದೆ ಎಂದರು.

ತಹಶೀಲ್ದಾರ್ ಸಯ್ಯದ್ ಕಲೀಂ ಉಲ್ಲಾ ಮಾತನಾಡಿ, ಸಮಾಜದಲ್ಲಿ ಅಕ್ಷರ ಬೀಜ ಬಿತ್ತುವ ಮೂಲಕ ಶೈಕ್ಷಣಿಕ ಕೃಷಿ ಚಟುವಟಿಕೆಯಲ್ಲಿ ಸಕ್ರಿಯರಾದ, ಉಜ್ವಲ ಭವಿಷ್ಯ ರೂಪಿಸುವ ಶಿಕ್ಷಕ ವೃತ್ತಿ ಪವಿತ್ರವಾದದ್ದು ಎಂದರು.



ಜಗಳೂರು ಶಾಸಕ ದೇವೇಂದ್ರಪ್ಪ ಕರೆ

ಉಪನ್ಯಾಸಕಿ ಸುಮತಿ ಜಯ್ಯಪ್ಪ ವಿಶೇಷ ಉಪನ್ಯಾಸ ನೀಡುತ್ತಾ, ಪ್ರಾಚೀನ ಕಾಲದಿಂದಲೂ ಶಿಕ್ಷಕ ವೃತ್ತಿಗೆ ಸೂಕ್ತ ಸ್ಥಾನಮಾನದ ಗೌರವವಿದೆ. ತಂತ್ರಜ್ಞಾನ ಆಧಾರಿತ ಶಿಕ್ಷಣಕ್ಕೆ ಶಿಕ್ಷಕರು ಹೊಂದಿಕೊಳ್ಳಬೇಕಿದೆ ಎಂದರು.

ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತರಿಗೆ, 57 ಜನ ನಿವೃತ್ತ (2ನೇ ಪುಟಕ್ಕೆ)

## ಕೆಐಎಡಿಬಿ ಹಗರಣ : ಇಬ್ಬರ ಬಂಧನ

ನವದೆಹಲಿ, ಸೆ. 5 - ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ನಿವೃತ್ತ ಅಧಿಕಾರಿ ಹಾಗೂ ಜಮೀನು ಬ್ರೋಕರ್ ಒಬ್ಬರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ.

ಪರಿಹಾರದ ಸೋಗಿನಲ್ಲಿ ಮಂಡಳಿಗೆ 72 ಕೋಟಿ ರೂಪಾಯಿಗಳನ್ನು ವಂಚಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯ (2ನೇ ಪುಟಕ್ಕೆ)


**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಸಿಟಿ ವಾಸಿ
ಶ್ರೀ ನಾಡಿಗರ ಶಿವದೇವಪ್ಪ
ಇವರ ಧರ್ಮಪತ್ನಿ
**ದಿ. ಶ್ರೀಮತಿ ನಾಡಿಗರ ಶಾರದಮ್ಮ**
ಇವರು ದಿನಾಂಕ : 29-08-2024ನೇ ಗುರುವಾರ ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 06-09-2024ನೇ ಶುಕ್ರವಾರ ಬೆಳಿಗ್ಗೆ 9.00 ಗಂಟೆಗೆ ಶ್ರೀ ಸಾಯಿಬಾಬಾ ಸಮುದಾಯ ಭವನ, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ರಸ್ತೆ, ಜಯನಗರ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು, ಪತಿ : ಶಿವದೇವಪ್ಪ, ಮಗ : ರುದ್ರೇಶ್, ಶ್ರೀಮತಿ ಸೌಮ್ಯ ಮತ್ತು ನಾಡಿಗರ ವಂಶಸ್ಥರು, ಬ್ಯಾಡಗಿ ವಂಶಸ್ಥರು, ಕರಿಯಪ್ಪ ವಂಶಸ್ಥರು, ಹೊರಟ್ಟಿ ವಂಶಸ್ಥರು ಅಜ್ಜಪ್ಪರ ವಂಶಸ್ಥರು ಹಾಗೂ ಕುಟುಂಬ ವರ್ಗದವರು. ಮೊ. : 9844415701, 9844966593

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.





# ಹರಿಹರ : ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗೆ ಸಿದ್ಧತೆ

ಹರಿಹರ, ಸೆ.5- ನಗರದ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದ ಮುಂಭಾಗದಲ್ಲಿ ಹಿಂದೂ ಜಾಗರಣ ವೇದಿಕೆಯ ವತಿಯಿಂದ ಹಾಗೂ ಹಿಂದೂ ಮಹಾ ಗಣಪತಿ ಸಂಘದಿಂದ 5ನೇ ವರ್ಷದ ಗಣೇಶೋತ್ಸವ ಅಂಗವಾಗಿ ನಾಡಿದ್ದು ದಿನಾಂಕ 7ರ ಶನಿವಾರ ಬೆಳಗ್ಗೆ 11 ಗಂಟೆಗೆ ಬೃಹತ್ ಪೆಂಡಲ್‌ನಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ.

ಶನಿವಾರ ಬೆಳಿಗ್ಗೆ ಗಣೇಶನಿಗೆ ವಿಶೇಷ ಪೂಜೆ ಅಲಂಕಾರ, ಪ್ರಸಾದ ವಿನಿಯೋಗವಿರುತ್ತದೆ. ಸಂಜೆ ವಿವಿಧ ಮಹಿಳಾ ಸಂಘದವರಿಂದ ಭಜನೆ ನಡೆಯಲಿದೆ.

ದಿನಾಂಕ 7 ರಿಂದ 29 ರವರೆಗೆ ಪ್ರತಿದಿನ ಬೆಳಿಗ್ಗೆ ವಿಶೇಷ ಪೂಜೆ, ಸಂಜೆ ಸಂಗೀತ, ನೃತ್ಯ, ಭಜನೆ, ವಿವಿಧ ಮನರಂಜನೆ ಕಾರ್ಯಕ್ರಮ ಸೇರಿದಂತೆ ವಿವಿಧ ಸಾಧಕರಿಂದ ಪ್ರವಚನಗಳು ನಡೆಯಲಿವೆ.

ದಿನಾಂಕ 16ರ ಸೋಮವಾರ ಬೆಳಿಗ್ಗೆ 8 ಕ್ಕೆ ಶಕ್ತಿ ದೇವತೆಗಳ ಸಮ್ಮುಖದಲ್ಲಿ ನವಗ್ರಹ ಹೋಮ, ಗಣಪತಿ ಹೋಮ, ಮಹಾ ಮೃತ್ಯುಂಜಯ ಹೋಮ, ಮನ್ಯು ಸೂಕ್ತ ಹೋಮ, ದೇವಿ ಸೂಕ್ತ ಹೋಮ ನಡೆಯಲಿದೆ.

ದಿನಾಂಕ 29 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶೋಭಾಯಾತ್ರೆ ಮೆರವಣಿಗೆ ಜರುಗಲಿದೆ. ಶೋಭಾಯಾತ್ರೆಯು ಡಿಜೆ ಸೌಂಡ್ ಸಿಸ್ಟಂ, ಸಮಾಳ, ಡ್ರಮ್ ಸೇಟ್ ಹಾಗೂ ವಿವಿಧ ಕಲಾ ಮೇಳಗಳೊಂದಿಗೆ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭಗೊಂಡು, ಹಳೇ ಪಿ.ಬಿ.ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆಯ ಮುಖಾಂತರ ಹಾದು ಮೆಟ್ಟಿಲು ಹೊಳೆ ರಸ್ತೆಯ ಹತ್ತಿರ, ತುಂಗಭದ್ರಾ ನದಿಯಲ್ಲಿ ಗಣಪತಿ ವಿಸರ್ಜನೆ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ ಹಿಂದೂ ಮಹಾ ಗಣಪತಿ ಸಮಿತಿ ಮುಖಂಡರಾದ ಬಸವನಗೌಡ್ರು, ದಿನೇಶ್, ಹೆಚ್.ಎಸ್. ರಾಘವೇಂದ್ರ, ಚಂದನ್ ಮೂರ್ಕಲ್, ಚಂದ್ರಕಾಂತ್ ಗೌಡ, ರಟ್ಟಿಹಳ್ಳಿ ಮಂಜುನಾಥ್, ರಾಜು ರೋಖಡೆ, ಅಜಿತ್ ಸಾವಂತ್, ಶ್ರೀನಿವಾಸ್ ಚಂದಪೂರ್, ಶಿವು ಗಜಪುರ, ಸ್ವಾತಿ ಹನುಮಂತ್, ಗಿರೀಶ್ ಗೌಡ, ಹರ್ಷ ದುರಗೋಜಿ, ಧರಣೇಂದ್ರ ಜೈನ್, ಅದ್ವೈತ ಶಾಸ್ತ್ರಿ, ಇತರರು ಹಾಜರಿದ್ದರು.

# ಡಾ. ರಾಧಾಕೃಷ್ಣನ್ ಆದರ್ಶ ಪಾಲಿಸಿದಾಗ ಸಮಾಜ ಬಲಿಷ್ಠ

## ಹರಿಹರದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಪ್ರಾಂಶುಪಾಲ ಡಾ. ಮಂಜಣ್ಣ



ಹರಿಹರ, ಸೆ.5- ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆದರ್ಶ ಮೌಲ್ಯಗಳನ್ನು ಗೌರವಿಸುವುದರ ಜೊತೆಗೆ ಅವುಗಳನ್ನು ಪಾಲಿಸಿಕೊಂಡು ಹೋದಾಗ ಬಲಿಷ್ಠ ಸಮಾಜ ಕಟ್ಟಲು ಸಾಧ್ಯವಾಗುತ್ತದೆ ಎಂದು ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ. ಎಂ. ಮಂಜಣ್ಣ ಅಭಿಪ್ರಾಯಪಟ್ಟರು.

ಗುರು ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆ ಮತ್ತು ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕತ್ತಲಿನಲ್ಲಿರುವ ವಿದ್ಯಾರ್ಥಿಗಳನ್ನು ಬೆಳಕಿನ ಕಡೆಗೆ ತೆಗೆದುಕೊಂಡು ಹೋಗುವಂತಹ ಗುಣವನ್ನು ಹೊಂದಿರುವವರು ಮಾತ್ರ ನಿಜವಾದ ಶಿಕ್ಷಕರಾಗಲು ಸಾಧ್ಯ. ಸಾಮಾನ್ಯ ಶಿಕ್ಷಕರು ಬೋಧಿಸುತ್ತಾರೆ, ಉತ್ತಮ ಶಿಕ್ಷಕರು ಜ್ಞಾನ ನೀಡುತ್ತಾರೆ ಆದರೆ ನಿಜವಾದ ಶಿಕ್ಷಕರು ಸ್ಫೂರ್ತಿ ನೀಡುತ್ತಾರೆ. ಓದನ್ನು ಕಲಿಸಿ ಜ್ಞಾನ ನೀಡುವುದು ಮುಖ್ಯವಲ್ಲ, ವಿದ್ಯಾರ್ಥಿಗಳನ್ನು ಆದರ್ಶ ಮತ್ತು ವಿನಯವಂತರನ್ನಾಗಿ ರೂಪಿಸಬೇಕಾಗಿದೆ ಎಂದರು.

ಒಬ್ಬ ಆರಕ್ಷಕ ಇಲ್ಲದೇ ಹೋದರೆ ಸಮಾಜದಲ್ಲಿ ಬದ್ದತೆ ಇರುವುದಿಲ್ಲ, ಒಬ್ಬ ವೈದ್ಯರು ಇಲ್ಲದೇ ಹೋದರೆ ಆರೋಗ್ಯ ಸುಧಾರಣೆ ಇರೋಲ್ಲ, ಒಬ್ಬ ವಕೀಲರು ಇಲ್ಲದೇ ಹೋದರೆ ನ್ಯಾಯವನ್ನು ಪಡಯಲಿಕ್ಕೆ ಆಗುವುದಿಲ್ಲ. ಆದರೆ ಇವರೆಲ್ಲರನ್ನೂ ರೂಪಿಸುವ ಜ್ಞಾನ ಶಿಕ್ಷಕರಿಗೆ ಮಾತ್ರ ಇದೆ. ಇಂತಹ ಅದ್ಬುತ ಶಕ್ತಿಯನ್ನು ಹೊಂದಿರುವ ಶಿಕ್ಷಣ ಕ್ಷೇತ್ರ ಯಾವ ಯಾವ ದಿಕ್ಕಿನಲ್ಲಿ ಸಾಗಿದೆ ಮತ್ತು ಶಿಕ್ಷಣ ವ್ಯವಸ್ಥೆ ಏನಾಗುತ್ತಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಬಿಇಓ ಡಿ.ದುರುಗಪ್ಪ ಪ್ರಾಸ್ತಾವಿಕ ಮಾತನಾಡಿ, ಸಮಾಜಕ್ಕೆ ಜ್ಞಾನದ ಬೆಳಕನ್ನು ನೀಡಿ, ಮಾನವೀಯ ಮೌಲ್ಯಗಳನ್ನು ಹೇಳಿಕೊಟ್ಟು, ಸಮಾಜದಲ್ಲಿ ಗೌರವ ಯುತವಾಗಿ ಬದುಕನ್ನು ಕಟ್ಟಿಕೊಳ್ಳುವಂತಹ ದಾರಿಯನ್ನು ತೋರಿಸಿರುವ ಡಾ. ರಾಧಾಕೃಷ್ಣನ್ ಸಮಾಜದ ದೊಡ್ಡ ಆಸ್ತಿಯಾಗಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಕ್ಷೇತ್ರ ಸಮನ್ವಯ ಅಧಿಕಾರಿ ಹೆಚ್. ಕೃಷ್ಣಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ಎಸ್. ಮಂಜುನಾಥ್, ಬೀರಪ್ಪ, ಕುಬೇರಪ್ಪ, ವೀರೇಶ್, ಹೆಚ್. ಚಂದ್ರಪ್ಪ, ಶರಣ್ ಕುಮಾರ್ ಹೆಗಡೆ, ಈಶಪ್ಪ ಬೂದಿಹಾಳ, ಎ.ಕೆ. ಭೂಮೇಶ್, ಬಸವರಾಜಯ್ಯ, ಆಷ್ಫಾಕ್ ಆಹ್ಮದ್, ಬಿ.ಬಿ. ರೇವಣನಾಯ್ಕ್, ಎ. ರಿಯಾಜ್ ಆಹ್ಮದ್, ಮಂಜಪ್ಪ ಬಿದರಿ. ಸಿದ್ದಪ್ಪ ಸಂಗಣ್ಣನವರ್, ಮಂಜಪ್ಪ, ಗದಿಗೆಪ್ಪ, ಇತರರು ಹಾಜರಿದ್ದರು.

ಎಂ.ಕೆ.ಇ.ಟಿ ಶಾಲಾ ವಿದ್ಯಾರ್ಥಿಗಳು ನಾಡಗೀತೆ ಮತ್ತು ರೈತಗೀತೆ ಹಾಡಿದರು. ಪದ್ದಪ್ಪ ಬಿ.ಎಸ್., ರೂಪಾ ಎಸ್ ನಿರೂಪಿಸಿದರು. ಶಾಸಕ ಬಿ.ಪಿ. ಹರೀಶ್ ಬೆಂಗಳೂರಿಗೆ ಹೋಗಿದ್ದರಿಂದ ಅವರು ಶುಭಾಶಯ ಕೋರಿದ ವಿಡಿಯೋವನ್ನು ಸಮಾರಂಭದಲ್ಲಿ ಪ್ರಸ್ತುತ ಪಡಿಸಲಾಯಿತು ಮತ್ತು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಕಳುಹಿಸಿದ್ದ ಅಭಿನಂದನಾ ಪತ್ರ ಓದಲಾಯಿತು.

# ನಮ್ಮ ಸಂತೋಷ, ಸಾಧನೆಗೆ ಶಿಕ್ಷಕರೇ ಕಾರಣ

## ಹರಪನಹಳ್ಳಿ ಶಿಕ್ಷಕರ ದಿನಾಚರಣೆಯಲ್ಲಿ ಉಪವಿಭಾಗಧಿಕಾರಿ ಚಿದಾನಂದಸ್ವಾಮಿ



ಹರಪನಹಳ್ಳಿ, ಸೆ. 5- ಜೀವನದಲ್ಲಿ ನಾವು ದೊಡ್ಡ ನಗುವನ್ನು, ಸಂತೋಷದ ಮತ್ತು ಸಾಧನೆಯ ಕ್ಷಣವನ್ನು ಕಾಣಬೇಕೆಂದರೆ ಅದಕ್ಕೆ ಕಾರಣೀಕರ್ತರು ಶಿಕ್ಷಕರೇ ಆಗಿರುತ್ತಾರೆ ಎಂದು ಉಪವಿಭಾಗಾಧಿಕಾರಿ ಚಿದಾನಂದಸ್ವಾಮಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಶಿಕ್ಷಕರ ಸಂಘಟನೆಗಳು ಮತ್ತು ಸರ್ಕಾರಿ ನೌಕರರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಸಸಿ ಒಂದನ್ನು ತೋಟದಲ್ಲಿ ನೆಟ್ಟು ನಿತ್ಯ ಅದನ್ನು ಪೋಷಣೆ ಮಾಡಿ, ಅದರಿಂದ ಬರುವ ಫಲವನ್ನು ಕಾವಲುಗಾರ ಹೇಗೆ ರಕ್ಷಿಸುತ್ತಾನೋ, ಅದೇ ರೀತಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಬೆಳೆಸುತ್ತಾರೆ. ನಮ್ಮ ಮನಸ್ಸು ಮತ್ತು ಹೃದಯಗಳನ್ನು ಪೋಷಿಸುತ್ತಾರೆ. ನಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಬೆಳೆಯಲು ನಮಗೆ ಸಹಾಯ ಮಾಡುತ್ತಾರೆ. ನಮ್ಮ ಭವಿಷ್ಯ ಉಜ್ವಲವಾಗಬೇಕೆಂದರೆ ಅದಕ್ಕೆ ಶಿಕ್ಷಕರೇ ಕಾರಣರಾಗಿರುತ್ತಾರೆ ಎಂದರು.

ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ವೈ.ಎಚ್. ಮಾತನಾಡಿ, ಶಿಕ್ಷಕ ವೃತ್ತಿ ಎನ್ನುವುದು ಸತ್ತ ಮೇಲೂ ಜೀವಂತ ವೃತ್ತಿ ಎನಿಸುತ್ತದೆ ಹಾಗಾಗಿ ಶಿಕ್ಷಕರು ನಿರಂತರ ಅಧ್ಯಯನ ಶೀಲರಾಗಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮಾತನಾಡಿ, 'ಹಿಂದೆ ಗುರುವಿರಲಿ, ಮುಂದೆ ಗುರಿಯಿರಲಿ' ಎಂಬ ಒಂದು ಮಾತಿದೆ. ಅದೇ ರೀತಿ ಶಿಕ್ಷಕರು ಯಾವಾಗಲೂ ನಮಗೆ ಗುರಿ ತೋರಿಸುತ್ತಾರೆ. ನಾವು ಆ ಗುರಿಯ ಪಥದಲ್ಲಿ ನಡೆಯಬೇಕಷ್ಟೇ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ಮಾತನಾಡಿ, ತಾಲ್ಲೂಕಿನಲ್ಲಿ 1320 ಶಿಕ್ಷಕರು, 158 ಅತಿಥಿ ಶಿಕ್ಷಕರಿದ್ದು 271 ಖಾಲಿ ಹುದ್ದೆಗಳಿವೆ. 23 ಆಂಗ್ಲ ಮಾಧ್ಯಮ ಶಾಲೆಗಳಿದ್ದು, 23 ಎಲ್.ಕೆ.ಜಿ ಹಾಗೂ ಯು.ಕೆ.ಜಿ ಶಾಲೆಗಳು ಪ್ರಾರಂಭವಾಗಿದ್ದು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ನಾವು ಸದಾ ಸಿದ್ದರಿದ್ದೇವೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಾಮಪ್ಪ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಜಿ.ಪದ್ಮಲತಾ, ಜಿಲ್ಲಾ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎನ್. ಜಿ.ಮನೋಹರ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಎಂ.ಅಂಜನೇಯ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಚ್.ಕೆ. ಚಂದ್ರಪ್ಪ, ಪ್ರೌಢಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ತಿರುಪತಿ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಮಕಬುಲ್ ಬಾಷಾ, ಎನ್.ಪಿ.ಎಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ಸೊಪ್ಪಿನ, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಕೆ. ಷಣ್ಮುಖಪ್ಪ, ಶಿಕ್ಷಣ ಇಲಾಖೆಯ ಮಂಜುನಾಥ ಗಿರಜ್ಜಿ, ಶಿಕ್ಷಕರಾದ ಪದ್ಮರಾಜ ಜೈನ್, ಬಿ. ಕೊಟ್ರೇಶ, ಷರೀಫ್ ಸೇರಿದಂತೆ ಇತರರು ಇದ್ದರು

### ಹುಡುಗಿಗೆ 18 ವರ್ಷ ನಂತರವೇ ಮದುವೆ

**(1ನೇ ಪುಟದಿಂದ)** ಜಿಲ್ಲೆಯನ್ನಾಗಿಸಲು ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸಾರ್ವಜನಿಕರ ಕರ್ತವ್ಯವಾಗಿರುತ್ತದೆ. ಬಾಲ್ಯವಿವಾಹ ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ - 1098, 112 ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ದೂ.08192-222701ಗೆ ಗಮನಕ್ಕೆ ತರಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷ ಗಂಗಾಧರಸ್ವಾಮಿ ತಿಳಿಸಿದ್ದಾರೆ.

# ಕೋವಿಡ್ ಭ್ರಷ್ಟಾಚಾರ: ಕುನ್ಹಾ ವರದಿ ಅಧ್ಯಯನಕ್ಕೆ ಅಧಿಕಾರಿಗಳ ಸಮಿತಿ

ಬೆಂಗಳೂರು, ಸೆ.5- ಕೋವಿಡ್ ಸಂದರ್ಭದಲ್ಲಿ ರಾಜ್ಯದಲ್ಲಿ ವೈದ್ಯಕೀಯ ಪರಿಕರಗಳ ಖರೀದಿ, ವಿತರಣೆ ಮತ್ತು ಬಳಕೆ ವಿಷಯಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೇತೃತ್ವದ ನ್ಯಾಯಾಂಗ ಆಯೋಗ ಒಂದು ವರದಿಯನ್ನು ಸಲ್ಲಿಸಿದೆ.

ವರದಿಯನ್ನು ವಿಶ್ಲೇಷಿಸಿ ಅಧ್ಯಯನ ಮಾಡಿ ಮುಂದಿನ ಕ್ರಮಗಳ ಬಗ್ಗೆ ಅಗತ್ಯದ ಶಿಫಾರಸ್ಸುಗಳನ್ನು ಮಾಡಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಹಾಗೂ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ ಅತೀಕ್ ಅವರನ್ನೊಳಗೊಂಡ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ ಎಂದು ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್.ಕೆ. ಪಾಟೀಲ್ ಇಂದಿಲ್ಲಿ ಪ್ರಕಟಿಸಿದರು.

ಸಚಿವ ಸಂಪುಟದ ನಿರ್ಣಯಗಳನ್ನು ಮಾಧ್ಯಮ ಪ್ರತಿನಿಧಿಗಳಿಗೆ ವಿವರಿಸಿದ ಅವರು ಕೋವಿಡ್ ಚಿಕಿತ್ಸೆಯ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂದು ನ್ಯಾಯಾಂಗ ಆಯೋಗ ವರದಿ ಸಲ್ಲಿಸಿದೆ ಎಂದು ತಿಳಿಸಿದರು. ತಾವು ಮತ್ತು ರಾಮಲಿಂಗಾರೆಡ್ಡಿಯವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕೋವಿಡ್ ಭ್ರಷ್ಟಾಚಾರದ ಕುರಿತು ವಿವರವಾದ ವರದಿಯನ್ನು ವಿಧಾನ ಮಂಡಲಕ್ಕೆ ಸಲ್ಲಿಸಲಾಗಿತ್ತು. ಆದರೆ ಬಿ.ಜೆ.ಪಿ. ಆಡಳಿತಾವಧಿಯಲ್ಲಿ ಅಂದಿನ ಸಭಾಧ್ಯಕ್ಷರು ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಲಿಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಮುಡಾ ಹಗರಣದ ನಂತರ ಕೋವಿಡ್ ಭ್ರಷ್ಟಾಚಾರವನ್ನು ಪ್ರಸ್ತಾಪಿಸುತ್ತಿರುವುದು ಪ್ರತಿಕಾರದ ಕ್ರಮವಲ್ಲವೇ ಎಂದು ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮುಡಾ ಎಂಬ ಹೆಸರಿನ ಹಗರಣವಲ್ಲದಿದ್ದರೂ ಪ್ರಸ್ತಾಪವಾಗಿ ಕೇವಲ ಎರಡು ತಿಂಗಳು ಗತಿಸಿದೆ. ಆದರೆ ಕೋವಿಡ್ ಭ್ರಷ್ಟಾಚಾರ ಕುರಿತು ನ್ಯಾಯಾಂಗ ಆಯೋಗ ರಚನೆಯಾಗಿ ಒಂದು ವರ್ಷ ಕಳೆದಿದೆ. ಪ್ರತಿಕಾರದ ಕ್ರಮ ಎಲ್ಲಿಂದ ಬಂತು ಎಂದು ಮರು ಪ್ರಶ್ನೆ ಮಾಡಿದರು.

### ಸ್ವರ್ಣ ಗೌರಿ ಪಾಲಿಸು

ಭಾದ್ರ ಪದ ಶುದ್ಧ ತದಿಗೆ ಇಂದು
ಭದ್ರೆ ನೀ ಬಾ ಶುಭ ದಿನದಂದು
ಆರ್ದ್ರತೆ ಯಲಿ ನೋಡಿ ನಮ್ಮನು
ಉದ್ಧರಿಸಿ ಕಾಯಮ್ಮ ಜಗದಂಬೆ ನೀ

ಪಾಲಿಸೆ ನೀ ಎನ್ನನು ಕಾತ್ಯಾಯಿನಿ
ಲಾಲಿಸು ಮಾತೆನ್ನಾ ದಾಕ್ಷಾಯಿಣಿ
ಪನ್ನಗವೇಣಿ ತಾಯೆ ಭವಾನಿ
ಎನ್ನುವ ಗುಣಗಳ ಮನ್ನಿಸಮ್ಮ ಮಾನಿನೀ

ಹಿಮಾವಂತ ಗಿರಿಯ ಕುಮಾರಿ
ಉಮೇಯೇ ನೀ ಬಾ ಭುವನೇಶ್ವರಿ
ಅರಿಶಿನ ಕುಂಕುಮ ಪುಷ್ಪ ಅರ್ಚಿಸುವೆ
ತೋರು ಕೃಪೆ ನೀನಿಂದು

ಗಣಪ ಷಣ್ಮುಖರ ತಾಯೇ
ಅನವರತ ನಮ್ಮನು ಕಾಯೇ
ಅನುಗಾಲ ಸುಖ ಶಾಂತಿ ಕರುಣಿಸಿ
ಅನುದಿನ ಹರಸಮ್ಮ
ಮುದ್ದು ಬಾಲಕೃಷ್ಣ ಸೋದರಿಯೇ

**- ಕೋಮಲ ವಿ. ಕುಮಾರ್,**
ದಾವಣಗೆರೆ.

# ಕೆಐಎಡಿಬಿ ಹಗರಣ : ಇಬ್ಬರ ಬಂಧನ

**(1ನೇ ಪುಟದಿಂದ)** ಪ್ರಕರಣ ದಾಖಲಿಸಿದೆ.

ಈ ಸಂಬಂಧ ಮಂಡಳಿಯ ನಿವೃತ್ತ ಅಧಿಕಾರಿ ವಸಂತ ಕುಮಾರ್ ದುರ್ಗಪ್ಪ ಸಜ್ಜನ್ ಹಾಗೂ ಅಲ್ಲಾಬಕ್ಷ್ ದುಂಡಸಿ ಎಂಬುವವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ.

ಸಜ್ಜನ್ ಹಾಗೂ ಮಂಡಳಿಯ ಇತರ ಅಧಿಕಾರಿಗಳು ಧಾರವಾಡದಲ್ಲಿ ಜಮೀನು ವಶಕ್ಕೆ ಸಂಬಂಧಿಸಿದಂತೆ ಪರಿಹಾರ ನೀಡುವ ನೆಪದಲ್ಲಿ ಹಣ ಕಬಳಿಕೆ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು.

2010 - 12ರಲ್ಲೇ ಕೆಲ ರೈತರಿಗೆ ಪರಿಹಾರ ನೀಡಲಾಗಿತ್ತು. ಆದರೆ, 2021-22ರಲ್ಲಿ ಇದೇ ರೈತರಿಗೆ ಪರಿಹಾರ ನೀಡುವ ಹೆಸರಿನಲ್ಲಿ ಹಣ ಬಿಡುಗಡೆ ಮಾಡಲಾಗಿತ್ತು. ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಣ ಪಡೆಯಲಾಗಿತ್ತು.

### ಜೆ.ಕೆ. ಪ್ರಶಾಂತ್ ನಿಧನ



ದಾವಣಗೆರೆ ಆನೆಕೊಂಡಪೇಟೆ ವಾಸಿ ಜೆ.ಕೆ. ಪ್ರಶಾಂತ್ (49) ಅವರು ದಿನಾಂಕ 5.9.2024ರ ಗುರುವಾರ ಸಂಜೆ 5.15ಕ್ಕೆ ನಿಧನರಾದರು. ಪತ್ನಿ ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.9.2024ರ ಶುಕ್ರವಾರ ಮಧ್ಯಾಹ್ನ 12ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಶಾಮನೂರಿನ ಶ್ರೀಮತಿ ನಾಗಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಲೇಟ್ ಕುಂದುವಾಡದ ಕಲ್ಲಪ್ಪನವರ ಧರ್ಮಪತ್ನಿ ಶ್ರೀಮತಿ ನಾಗಮ್ಮ (90) ಇವರು ದಿನಾಂಕ 5.9.2024ರ ಗುರುವಾರ ರಾತ್ರಿ 7.15ಕ್ಕೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.9.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಆಲೂರಿನ ಹನಗವಾಡಿ ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು
ಆಲೂರು ಗ್ರಾಮದ ವಾಸಿ
**ಹನಗವಾಡಿ ಹನುಮಂತಪ್ಪ** (81)
ಅವರು ದಿನಾಂಕ 05.09.2024ರ
ಗುರುವಾರ ರಾತ್ರಿ 8 ಗಂಟೆಗೆ ನಿಧನರಾದರು.
ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು
ಹಾಗೂ ಅಪಾರ ಬಂಧುಗಳನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯು ದಿನಾಂಕ
06.09.2024ರ ಶುಕ್ರವಾರ ಮಧ್ಯಾಹ್ನ 12
ಗಂಟೆಗೆ ಸ್ವಗ್ರಾಮ ಆಲೂರಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗದವರು, ಮೊ : 97400 31112**

### ಫುಡ್ ಕಿಟ್ ಇಲ್ಲ

**(1ನೇ ಪುಟದಿಂದ)** ಅನುಮೋದನೆ ನೀಡಿದೆ.

ಸ್ವಸಹಾಯ ಗುಂಪುಗಳ ಸದಸ್ಯರಾಗಿರುವ ಒಂದು ಲಕ್ಷ ಮಹಿಳೆಯರಿಗೆ ಕಾಫಿ ಮಂಡಳಿ ಸಹಭಾಗಿತ್ವದಲ್ಲಿ ಕಾಫಿ ಉದ್ಯಮಿಗಳಾಗಲು ತರಬೇತಿ ನೀಡುವ ಜೊತೆಯಲ್ಲಿ 25 ಕೋಟಿ ರೂ. ವೆಚ್ಚದಲ್ಲಿ 2,500 ಕಾಫಿ ಕಿಯೋಸ್ಕ್ ತೆರೆಯಲು ಅನುಮತಿ ನೀಡಿದೆ.

### ಮಲೇಬೆನ್ನೂರಿನಲ್ಲಿ ಅಪರಿಚಿತ ಶವ ಪತ್ತೆ

ಮಲೇಬೆನ್ನೂರು, ಸೆ.5-ಸುಮಾರು 50 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ. ಈತನ ಬಲಗೈ ಯಲ್ಲಿ ಲಕ್ಷ್ಮಿ ದೇವಿ. ಎಡಕೈಯಲ್ಲಿ ಭೀಮಪ್ಪ ಅಂತ ಹಚ್ಚೆ ಇರುತ್ತದೆ. ಸಂಬಂಧ ಪಟ್ಟವರು ಮಲೇಬೆನ್ನೂರು ಠಾಣೆ ಪೊಲೀಸರನ್ನು ಸಂಪರ್ಕಿಸಬಹುದು.

### ಎ.ಎಸ್ ಶೋಭಾ ನಿಧನ



ದಾವಣಗೆರೆ, ಎಂಸಿಸಿ ಬಿ ಬ್ಲಾಕ್ ವಾಸಿ ಔಷಧಿ ವಿತರಕರಾದ ಎನ್.ಬಿ ಸಿದ್ದರಾಮಯ್ಯ ನಾಗರಾಳ್ ಇವರ ಧರ್ಮಪತ್ನಿ ಶ್ರೀಮತಿ ಶೋಭಾ (60) ಇವರು ದಿನಾಂಕ 6.9.2024ರ ಬೆಳಿಗ್ಗೆ 12.15ಕ್ಕೆ ನಿಧನರಾದರು. ಪುತ್ರ ಡಾ. ಎನ್.ಎಸ್. ಶರತ್ ಕುಮಾರ್, ವೈದ್ಯರು, ಬಾಪೂಜಿ ಡೆಂಟಲ್ ಕಾಲೇಜು. ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಎಂಸಿಸಿ ಬಿ ಬ್ಲಾಕ್‌ನ ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 9.30ರವರಗೆ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಅಂತ್ಯಕ್ರಿಯೆಯು ದಿನಾಂಕ 6.9.2024ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಅರಸಿಕೆರೆ ಜಮೀನಿನಲ್ಲಿ ನೆರವೇರಲಿದೆ.

### ಕಲಿಕೆಯ ವಿದ್ಯಾರ್ಥಿ ಆಗಿರಬೇಕು

**(1ನೇ ಪುಟದಿಂದ)** ಶಿಕ್ಷಕರಿಗೆ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಭಾಜನರಾದ 4 ಜನರಿಗೆ ಸನ್ಮಾನಿಸಲಾ ಯಿತು.

ಸಮಾರಂಭದಲ್ಲಿ ಮುಖಂಡರಾದ ಕೆ.ಪಿ. ಪಾಲಯ್ಯ , ಬಿಇಓ ಹಾಲಮೂರ್ತಿ, ತಾ.ಪಂ.ಇಓ ಕೆಂಚಪ್ಪ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಬಿ. ನಾಗರಾಜ್, ಬಿ.ಆರ್.ಸಿ ಡಿ ಡಿ.ಹಾಲಪ್ಪ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷೆ ವೀಣಾ ಗೋಗುದ್ದು ರಾಜ್, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಉಪನ್ಯಾಸಕ ಎ.ಎಲ್. ತಿಪ್ಪೇಸ್ವಾಮಿ ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ ಇತರರು ಉಪಸ್ಥಿತರಿದ್ದರು.

# ರಂಗನಾಥ್ ಹೆಸರು ಉಳಿಯಲಿ: ತರಳಬಾಳು ಶ್ರೀ

**(1ನೇ ಪುಟದಿಂದ)** ನಾ. ಲೋಕೇಶ್ ಒಡೆಯರ್ ಮಾತನಾಡಿ, ಶಿಸ್ತು ಹಾಗೂ ದೃಢ ನಿರ್ಧಾರದ ಸ್ವಭಾವ ಹೊಂದಿದ್ದ ರಂಗನಾಥ್ ಅವರು, ತಮ್ಮೊಂದಿಗೆ ಕಾರ್ಯನಿರ್ವಹಿಸುವವರನ್ನು ವಿಶ್ವಾಸಕ್ಕೆ ಪಡೆಯುವುದನ್ನು ಅರಿತಿದ್ದರು. ಸಮರ್ಪಣಾ ಭಾವದಿಂದ ಮಠದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದರು.

ಶಿಕ್ಷಣ ತಜ್ಞ ಬಿ.ರಾಜಶೇಖರಪ್ಪ ಮಾತನಾಡಿ, ರಂಗನಾಥ್ ಅವರ ಸಾಧನೆಯನ್ನು ಪರಿಚಯಿಸಲು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ ಎಂದರು.

ಕದಳಿ ವೇದಿಕೆಯಿಂದ ವಚನ ಗಾಯನ ನೆರವೇರಿತು. ಎಸ್.ಬಿ. ರಾಜಶೇಖರ್ ಸ್ವಾಗತಿಸಿದರು. ಎಸ್.ಆರ್. ಪಂಕಜ ನಿರೂಪಿಸಿದರು.

ನಾಗರಾಜ ಸಿರಿಗೆರೆ ವಂದನಾರ್ಪಣೆ ನೆರವೇರಿಸಿದರು.

### 'ಭಕ್ತಿಯ ವಿಲ್' ಬರೆದ ರಂಗನಾಥ್

ವಯಸ್ಸಾದವರು ತಮ್ಮ ಆಸ್ತಿಯ ಕುರಿತು ವಿಲ್ ಬರೆಯುತ್ತಾರೆ. ಆದರೆ, ಎಸ್.ಬಿ. ರಂಗನಾಥ್ ಅವರು ಗುರುಗಳ ಮೇಲಿನ 'ಭಕ್ತಿಯ ವಿಲ್' ಬರೆದಿದ್ದಾರೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ರಂಗನಾಥ್ ಅವರು ವಿಧಿವಶರಾಗುವ ನಾಲ್ಕು ದಿನಗಳ ಹಿಂದೆ ಇತ್ತೀಚಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಬಹಳ ಮನನೊಂದು, ಪತ್ರಿಕೆಯೊಂದಕ್ಕೆ ಪತ್ರ ಬರೆದಿದ್ದರು. ಆ ಪತ್ರದ ಕರಡು ಅಂತ್ಯಕ್ರಿತಯೆಗೆ ತೆರಳಿದ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಬಂದಿತ್ತು. ಆ ಸ್ವಹಸ್ತಾಕ್ಷರದ ಪತ್ರದ ಕರಡು ಪ್ರತಿಯನ್ನು ನಮ್ಮ ಮಠದ ಸುದ್ದಿ ಪೋರ್ಟಲ್‌ನಲ್ಲಿ ಪ್ರಕಟಿಸಿದ್ದೇವೆ ಎಂದರು.

ಮಠ ಹಾಗೂ ಗುರುಗಳ ಮೇಲೆ ಅಪಾರ ಭಕ್ತಿ ಹೊಂದಿದ್ದ ರಂಗನಾಥ್ ಅವರು ಕೊನೆಯ ದಿನಗಳಲ್ಲಿ ಬರೆದ ಪತ್ರವನ್ನು ಭಕ್ತಿಯ ವಿಲ್ ಎಂದು ಪರಿಗಣಿಸಿರುವುದಾಗಿ ಶ್ರೀಗಳು ತಿಳಿಸಿದರು. ಯಾವುದೇ ಕೆಲಸ ಹಿಡಿದರೂ ಪೂರ್ಣಗೊಳಿಸುವ ಸ್ವಭಾವ ರಂಗನಾಥ್ ಅವರದ್ದಾಗಿತ್ತು. ಹೀಗಾಗಿ ನಮ್ಮ ಹಿರಿಯ ಗುರುಗಳಾದ ಲಿಂ. ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರು ಮೆಚ್ಚುಗೆಯಿಂದ 'ಅಂಟುಗ ರಂಗಣ್ಣ' ಎಂದು ಹೇಳುತ್ತಿದ್ದರು. ಇದೇ ಅವರ ಸ್ವಭಾವಕ್ಕೆ ಸೂಕ್ತ ಬಣ್ಣನೆ ಎಂದು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

# 17ರ ಬಾಲಕಿ ತಾಯಿಯಾಗಲು ಅನುಮತಿ

**(1ನೇ ಪುಟದಿಂದ)** ಅನುಮತಿ ನೀಡಿತ್ತು. ನಂತರ ನಿಲುವು ಬದಲಿಸಿದ್ದ ಬಾಲಕಿ, ವ್ಯಕ್ತಿಯ ಜೊತೆಗೆ ಸಮ್ಮತಿಯ ಸಂಬಂಧ ಹೊಂದಿದ್ದಾಗಿ ಹಾಗೂ ಆತನ ಜೊತೆ ಮದುವೆ ಮಾಡಿಕೊಳ್ಳುವುದಾಗಿ ತಿಳಿಸಿದರು. ಈ ಹಿನ್ನೆಲೆಯಲ್ಲಿ ಗರ್ಭಧಾರಣೆ ಮುಂದುವರೆಸಲು ಹೈಕೋರ್ಟ್ ಅನುಮತಿ ನೀಡಿದೆ. ಬಾಲಕಿ ಹಾಗೂ ಅವರ ತಾಯಿ ಗರ್ಭಾವಸ್ಥೆ ಮುಂದುವರೆಸಲು ಬಯಸಿರುವುದನ್ನು ಹೈಕೋರ್ಟ್ ಪರಿಗಣಿಸಿದೆ.

# ಶಾಲಾ ಕೊಠಡಿಯಾಚೆಗಿನ ಸಮಾಜಕ್ಕೂ ಶಿಕ್ಷಕರ ಕೊಡುಗೆ ಅಗತ್ಯ

**(1ನೇ ಪುಟದಿಂದ)** ತಮ್ಮ ಶಾಲಾ ಶಿಕ್ಷಕರನ್ನು ನೆನಪಿಸಿಕೊಂಡ ಸಂಸದರು, ಶಾಲೆ ಹೇಗಿರಬೇಕು? ಶಿಕ್ಷಕರು ಹೇಗಿರಬೇಕು? ಎಂಬುದನ್ನು ನನ್ನ ಬಾಲ್ಯದ ದಿನಗಳಲ್ಲಿ ನೋಡಿದ್ದೇನೆ. ಅಂದು ನಮ್ಮ ಶಿಕ್ಷಕರು ಪಠ್ಯದ ಜೊತೆ ಸಾಮಾನ್ಯ ಶಿಕ್ಷಣಕ್ಕೂ ಒತ್ತು ನೀಡುತ್ತಿದ್ದರು ಎಂದರು.

ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಶೇ.77ರಷ್ಟಿದೆ. ಉಳಿದ ಶೇ.23ರ ಕೊರತೆಯನ್ನು ನೀಗಿಸಿ ಜಿಲ್ಲೆಯಲ್ಲಿ ಶೇ.100ರಷ್ಟು ಸಾಕ್ಷರತೆ ತರಲು ಶಿಕ್ಷಕರು ಶ್ರಮಿಸಬೇಕು. ಶಿಕ್ಷಕರ ಜೊತೆ ಜಿಲ್ಲಾಡಳಿತ, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ನಾವೆಲ್ಲಾ ಇದ್ದೇವೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ರಾಜ್ಯಮಟ್ಟದಲ್ಲಿ ಎಷ್ಟನೇ ಸ್ಥಾನಕ್ಕೆ ಬರುತ್ತೀರೆಂಬುದನ್ನು ನೀವೇ ನಿರ್ಧರಿಸಿ, ಗುರಿ ರೂಪಿಸಿಕೊಳ್ಳಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಕೆಲವು ಶಾಲೆಗಳಲ್ಲಿ ಓದು ಬರಹ ಬಾರದ ಮಕ್ಕಳನ್ನೂ ಉತ್ತೀರ್ಣಗೊಳಿಸಿ ಮುಂದಿನ ತರಗತಿಗೆ ಪ್ರವೇಶ ನೀಡಲಾಗುತ್ತದೆ. ಇದು ಮಕ್ಕಳಿಗೆ ಮಾಡುವ ಅನ್ಯಾಯವಲ್ಲವೇ? ಎಂದು ಪ್ರಶ್ನಿಸಿದ ಜಿಲ್ಲಾಧಿಕಾರಿ, ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿ ಬಗ್ಗೆ ಶಿಕ್ಷಕರು ಪ್ರಶ್ನಿಸಿಕೊಳ್ಳಬೇಕು ಎಂದರು.

ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಶಿಕ್ಷಕರು ನಿವೃತ್ತಿ ಹೊಂದಿದ ಮೇಲೆ ಮನೆಯಲ್ಲಿ ಕಳೆಯುವ ಸಮಯವನ್ನು ಶಿಕ್ಷಕರ ಸಂಖ್ಯೆ ಕಡಿಮೆ ಇರುವ ಶಾಲೆಗಳಿಗೆ ಸ್ವಯಂ ಪ್ರೇರಿತರಾಗಿ ತೆರಳಿ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು ಎಂದರು.

ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ವಿಭಾಗದಿಂದ 12 ಹಾಗೂ ಪ್ರೌಢಶಾಲಾ ವಿಭಾಗದಿಂದ 6 ಶಿಕ್ಷಕರು ಸೇರಿದಂತೆ ಒಟ್ಟು 18 ಶಿಕ್ಷಕರಿಗೆ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಮತ್ತು ಮೂರು ದಶಕಗಳ ಕಾಲ ಕಾರ್ಯನಿರ್ವಹಿಸಿ ನಿವೃತ್ತರಾದ ಶಿಕ್ಷಕರನ್ನು ಇಲಾಖೆ ವತಿಯಿಂದ ಸನ್ಮಾನಿಸಲಾಯಿತು.

ಮಾಯಕೊಂಡ ಶಾಸಕ ಬಸವಂತಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕರಾದ ಎಸ್.ಗೀತಾ, ಬಿಇಓಗಳಾದ ಶೇರ್‌ಅಲಿ, ಪುಷ್ಪಲತಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್.ಎಸ್.ಒಡೇನಪುರ ಹಾಗೂ ಇತರರು ಉಪಸ್ಥಿತರಿದ್ದರು.

# ಪ್ರವೇಶ ನಿರಾಕರಿಸಿದ ಕಾಲೇಜಿಗೆ ದೈತ್ಯ ಉದ್ಯಮ ಸಾಮ್ರಾಜ್ಯ ಕಟ್ಟಿ ಬಂದ ವಿದ್ಯಾರ್ಥಿ

ನವದೆಹಲಿ, ಸೆ. 5 - 1970ರ ವೇಳೆ ವಿದ್ಯಾರ್ಥಿಯೋರ್ವ ಮುಂಬೈ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದ್ದ. ಆದರೆ ಕಾಲೇಜು ಆತನ ಅರ್ಜಿಯನ್ನು ತಳ್ಳಿ ಹಾಕಿತ್ತು. ಇದಾದ ಸುಮಾರು 45 ವರ್ಷಗಳ ನಂತರ ಅದೇ ವಿದ್ಯಾರ್ಥಿ 220 ಶತಕೋಟಿ ಡಾಲರ್ ಮೌಲ್ಯದ ಉದ್ಯಮ ಸಾಮ್ರಾಜ್ಯ ನಿರ್ಮಿಸಿ, ಅದೇ ಕಾಲೇಜಿನ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಮರಳಿದ್ದಾನೆ.

ಇದು ಉದ್ಯಮಿ ಗೌತಮ್ ಅದಾನಿ ಅವರ ಕಥೆ. ಅದಾನಿಗೆ ಹದಿನಾರು ವರ್ಷವಾಗಿದ್ದಾಗ ವಜ್ರದ ಘಟಕ ಒಂದರಲ್ಲಿ ಕೆಲಸ ಮಾಡುತ್ತಿದ್ದರು. 1977ರಲ್ಲಿ ಅವರು ಮುಂಬೈನ ಜೈಹಿಂದ್ ಕಾಲೇಜಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದ್ದರು.

ಆದರೆ ಅವರ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಅದೃಷ್ಟವೋ ಅಥವಾ ದುರಾದೃಷ್ಟವೋ ಕಾಲೇಜು ಪ್ರವೇಶ ಪಡೆಯಲು ಸಾಧ್ಯವಾಗದೆ ಅದಾನಿ ದುಡಿಮೆಗೆ ತೆರಳಿದ್ದರು. ಆನಂತರ ಅವರು ತಿರುಗಿ ನೋಡದೆ ದೈತ್ಯ ಉದ್ಯಮ ಸಮೂಹವನ್ನು ಸೃಷ್ಟಿಸಿದರು.

ಈಗ ಶಿಕ್ಷಕರ ದಿನಾಚರಣೆಯಂದು ಅದೇ ಕಾಲೇಜು ಅದಾನಿ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿತ್ತು. ಸಮಾರಂಭದಲ್ಲಿ ಜೈ ಹಿಂದ್ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷ ವಿಕ್ರಂ ನಂಕಣಿ ಮಾತನಾಡುತ್ತಾ, ಅದಾನಿ ಕಾಲೇಜಿಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಲು ವಿಫಲವಾದ ಪ್ರಸಂಗ ವಿವರಿಸಿದರು.

ಅದಾನಿ ಕಾಲೇಜಿಗೆ ಸೇರಲಿಲ್ಲ. ಆದರೆ, ಅರ್ಜಿ ಹಾಕಿದ್ದ ಕಾರಣ, ಇದೇ ಕಾಲೇಜಿನ ಹಿರಿಯ ವಿದ್ಯಾರ್ಥಿ ಎಂದು ಪರಿಗಣಿಸಿರುವುದಾಗಿ ನಂಕಣಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅದಾನಿ, ನನಗೆ ಕೇವಲ 16 ವರ್ಷವಾಗಿದ್ದಾಗ ನನ್ನ ಮಿತಿಗಳನ್ನು ದಾಟಿ ಬೆಳೆಯುವ ನಿರ್ಧಾರ ತೆಗೆದುಕೊಂಡೆ ಎಂದು ಹೇಳಿದರು.



ಆಗ ಶಿಕ್ಷಣದ ವಿಚಾರವನ್ನು ಕೈ ಬಿಟ್ಟು ಮುಂಬೈನಲ್ಲಿ ಭವಿಷ್ಯ ಹುಡುಕಿಕೊಂಡು ಅಲೆದಾಡುತ್ತಿದ್ದೆ. ಆಗ ಮುಂಬೈ ನನಗೆ ವಜ್ರ ವ್ಯಾಪಾರದ ತರಬೇತಿಯ ತಾಣವಾಗಿ ಕಂಡುಬಂದಿತ್ತು. ಇದರಿಂದ ನಾನು ಸಾಕಷ್ಟು ಕಲಿತೆ ಎಂದು ಹೇಳಿದರು.

ದೊಡ್ಡ ಆಲೋಚನೆಗಳು ಬರಬೇಕಾದರೆ, ನಮ್ಮ ಮಿತಿಗಳನ್ನು ದಾಟಿ ಕನಸು ಕಾಣುವ ಧೈರ್ಯ ತೋರಬೇಕು ಎಂಬುದನ್ನು ನಾನು ಮುಂಬೈನಲ್ಲಿ ಕಲಿತೆ ಎಂದು ಅದಾನಿ ತಿಳಿಸಿದರು.

1980 ರಲ್ಲಿ ಪಾಲಿಮರ್ ಆಮದು ಮಾಡಿಕೊಳ್ಳುವ ಉದ್ಯಮಕ್ಕೆ ಕಾಲಿರಿಸಿದೆ. ನನಗೆ 23 ವರ್ಷವಾಗಿದ್ದಾಗ ನನ್ನ ವ್ಯಾಪಾರಿ ಸಂಸ್ಥೆ ಉತ್ತಮವಾಗಿ ಬೆಳೆದಿತ್ತು ಎಂದವರು ಹೇಳಿದರು.

1991ರಲ್ಲಿ ಆರ್ಥಿಕ ಉದಾರೀಕರಣವಾದಾಗ ನಾನು ಜಾಗತಿಕ ವ್ಯಾಪಾರ ಸಂಸ್ಥೆ ಆರಂಭಿಸಿದೆ. ಪಾಲಿಮರ್, ಲೋಹ, ಜವಳಿ ಹಾಗೂ ಕೃಷಿ ಉತ್ಪನ್ನಗಳ ವಹಿವಾಟಿನಲ್ಲಿ ತೊಡಗಿದ್ದೆ. ಆಗ ನನಗೆ ಕೇವಲ 29 ವರ್ಷ ಎಂದು ಅದಾನಿ ಹೇಳಿದರು.

ಎರಡು ವರ್ಷಗಳಲ್ಲಿ ನಾವು ದೇಶದಲ್ಲಿ ಅತಿ ದೊಡ್ಡ ಜಾಗತಿಕ ವ್ಯಾಪಾರಿ ಸಂಸ್ಥೆಯನ್ನು ಬೆಳೆಸಿದ್ದೆವು. ಆ ಹಂತದಲ್ಲಿ ನನಗೆ ವೇಗ ಹಾಗೂ ಪ್ರಮಾಣದ ಮೌಲ್ಯ ಏನೆಂಬುದು ಸ್ಪಷ್ಟವಾಯಿತು. 1994ರಲ್ಲಿ ನಾವು ಸಾರ್ವಜನಿಕ ವಲಯದ ಕಂಪನಿಯಾಗಲು ನಿರ್ಧರಿಸಿದೆವು. ಈಗ ಅದಾನಿ ಎಂಟರ್‌ಪ್ರೈಸಸ್ ಎಂದು ಹೇಳಲಾಗುವ ಸಂಸ್ಥೆಯನ್ನು ಸಾರ್ವಜನಿಕ ಹೂಡಿಕೆಗೆ ತೆರೆದಿದ್ದೆವು. ನಮ್ಮ ಐ.ಪಿ.ಒ. ಯಶಸ್ವಿಯಾಯಿತು ಎಂದರು.

1990ರಲ್ಲಿ ಕಾರ್ಗಿಲ್ ಕಂಪನಿ ಜೊತೆಗೂಡಿ ಗುಜರಾತ್‌ನ ಕಚ್ ವಲಯದ ಮುಂದ್ರಾದಲ್ಲಿ ಉತ್ಪಾದನೆ ಹಾಗೂ ಉಪ್ಪಿನ ತಾಣ ನಿರ್ಮಿಸುವ ಪ್ರಯತ್ನ ನಡೆಸಿದವು. ಸಹಭಾಗಿತ್ವದ ಯತ್ನ ವಿಫಲವಾಯಿತು. ಆದರೆ, ನಮಗೆ 40 ಸಾವಿರ ಎಕರೆ ಬಂಜರು ಜಮೀನು ದೊರೆಯಿತು. ಅಲ್ಲೇ ನಾವು ಉಪ್ಪು ರಫ್ತು ಮಾಡುವ ತಾಣ ಆರಂಭಿಸಿದೆವು. ಆ ಬಂಜರು ಜಮೀನು ಈಗ ದೇಶದ ಅತಿ ದೊಡ್ಡ ಬಂದರಾಗಿ ಪರಿವರ್ತನೆಯಾಗಿದೆ ಎಂದು ಅದಾನಿ ಹೇಳಿದರು.

ಮುಂದ್ರಾದಲ್ಲಿ ಈಗ ಅತಿ ದೊಡ್ಡ ಕೈಗಾರಿಕಾ ವಿಶೇಷ ಆರ್ಥಿಕ ವಲಯವಿದೆ. ಅತಿ ದೊಡ್ಡ ಕಂಟೈನರ್, ಟರ್ಮಿನಲ್, ಶಾಖೋತ್ಪನ್ನ ವಿದ್ಯುತ್ ಘಟಕ ಹಾಗೂ ಅತಿ ದೊಡ್ಡ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವಿದೆ. ಅತಿ ದೊಡ್ಡ ಖಾದ್ಯ ತೈಲ ಸಂಸ್ಕರಣಾ ಘಟಕವೂ ಇದೆ.

ಇಷ್ಟಾದರೂ ನಾವು, ಮುಂದ್ರಾದ ಶೇ.10ರಷ್ಟು ಸಾಮರ್ಥ್ಯ ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದೆ ಎಂದವರು ಹೇಳಿದರು.

ಈಗ ನಾವು ಕಠಿಣ ಹವಾಮಾನದ ಕಚ್ ಮರಳುಗಾಡಿನಲ್ಲಿ ವಿಶ್ವದ ಅತಿ ದೊಡ್ಡ ನವೀಕರಣ ಇಂಧನ ಪಾರ್ಕ್ ನಿರ್ಮಿಸುತ್ತಿದ್ದೇವೆ. ಮುಂಬೈನ ಧಾರಾವಿ ಕೊಳಗೇರಿ ಮರು ಅಭಿವೃದ್ಧಿ ಪಡಿಸುತ್ತಿದ್ದೇವೆ ಎಂದವರು ಹೇಳಿದರು.

ನಾವು ದೇಶದ ವಿಮಾನ ನಿಲ್ದಾಣ, ಬಂದರು, ಸಾಗಣೆ, ಕೈಗಾರಿಕಾ ಪಾರ್ಕ್ ಹಾಗೂ ಇಂಧನ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಬದಲಿಸಲು ನೆರವಾಗುತ್ತಿದ್ದೇವೆ. ನಾವೇನೆಂಬುದನ್ನು ನಮ್ಮ ಗೆಲುವು ನಿರ್ಧರಿಸುವುದಿಲ್ಲ. ಸವಾಲುಗಳನ್ನು ಎದುರಿಸುವ ಮನೋಭಾವ ಅದಾನಿ ಸಮೂಹದ ದಾರಿಯನ್ನು ನಿರ್ಧರಿಸಿತು ಎಂದು ಗೌತಮ್ ಅದಾನಿ ಹೇಳಿದರು.

## ವಿದೇಶಿಯರು ಚೀನಾ ಮಗು ದತ್ತು ಪಡೆಯದಂತೆ ನಿರ್ಬಂಧ

ಬೀಜಿಂಗ್, ಸೆ. 5 - ವಿದೇಶಿಯರು ಇನ್ನು ಮುಂದೆ ಚೀನಾದಿಂದ ಮಕ್ಕಳನ್ನು ದತ್ತು ಪಡೆಯುವಂತಿಲ್ಲ ಎಂದು ನಿರ್ಬಂಧಿಸಲಾಗಿದೆ.

ರಕ್ತ ಸಂಬಂಧಿಗಳು ಮಾತ್ರ ಮಗುವನ್ನು ದತ್ತು ತೆಗೆದುಕೊಳ್ಳಲು ವಿನಾಯಿತಿ ಇದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್ ತಿಳಿಸಿದ್ದಾರೆ. ಈ ನಿರ್ಧಾರಕ್ಕೆ ಕಾರಣವೇನು ಎಂಬುದನ್ನು ಅವರು ವಿವರಿಸಿಲ್ಲ. ಆದರೆ ಅಂತರರಾಷ್ಟ್ರೀಯ ಪದ್ಧತಿಗಳಿಗೆ ಅನುಗುಣವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

ಹಲವಾರು ವಿದೇಶಿಯರು ಚೀನಾದಿಂದ ಮಕ್ಕಳನ್ನು ದತ್ತು ಪಡೆಯುವುದು ದಶಕಗಳಿಂದ ನಡೆದುಕೊಂಡು ಬಂದಿತ್ತು. ಆದರೆ ಕೊರೋನ ಅವಧಿಯಲ್ಲಿ ವಿದೇಶಿಯರು ದತ್ತು ಪಡೆಯುವುದನ್ನು ನಿಲ್ಲಿಸಲಾಗಿತ್ತು. ಕೊರೊನಾ ಸಮಸ್ಯೆ ಬಗೆಹರಿದ ನಂತರ ದತ್ತು ಪಡೆಯಲು ಮತ್ತೆ ಅವಕಾಶ ಮುಂದುವರೆಸಲಾಗಿತ್ತು.

## ಹಣಕಾಸು ವಲಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಕ್ಕೆ ರಿಸರ್ವ್ ಬ್ಯಾಂಕ್ ಗವರ್ನರ್ ಕರೆ

ಮುಂಬೈ, ಸೆ. 5 - ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಮಹಿಳಾ ಉದ್ಯಮಿಗಳಿಗೆ ಸೂಕ್ತವಾಗುವಂತಹ ಯೋಜನೆಗಳನ್ನು ರೂಪಿಸಲು ಹಣಕಾಸು ವಲಯ ಮುಂದಾಗಬೇಕಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಸಮಾರಂಭವೊಂದರಲ್ಲಿ ಮಾತನಾಡಿದ ಅವರು, ಬಾಲಕಿಯರ ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಕೆಲಸದ ಸ್ಥಳದ ಸುರಕ್ಷತೆ ಹಾಗೂ ಸಾಮಾಜಿಕ ಅಡ್ಡಿಗಳನ್ನು ನಿವಾರಿಸಲು ಯೋಜಿತ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಹೇಳಿದರು. ಮಹಿಳಾ ಉದ್ಯಮಿಗಳು ಆರ್ಥಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಆದರೆ ಭಾರತದಲ್ಲಿ ದೇಶದ ಸಣ್ಣ ಉದ್ಯಮಗಳ ಮಾಲೀಕರಲ್ಲಿ ಶೇ.20ರಷ್ಟು ಮಾತ್ರ ಮಹಿಳೆಯರಿದ್ದಾರೆ ಎಂದವರು ವಿಷಾದಿಸಿದರು. ಸೀಮಿತ ಬಂಡವಾಳ, ಸಾಮಾಜಿಕ ನಡಾವಳಿಗಳ ನಿರ್ಬಂಧ ಹಾಗೂ ಕೈಗೆಟುಕುವ ದರದ ಹಣಕಾಸು ಸೇರಿದಂತೆ ಹಲವಾರು ಸಮಸ್ಯೆಗಳನ್ನು ಮಹಿಳಾ ಉದ್ಯಮಿಗಳು ಎದುರಿಸುತ್ತಿದ್ದಾರೆ. ಸೂಕ್ತ ನೀತಿಗಳ ಮೂಲಕ ಬಂಡವಾಳ ವಲಯದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಇರುವ ಅಂತರ ನಿವಾರಿಸಬಹುದು ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಹೇಳಿದರು.

ಈ ಹಿನ್ನೆಲೆಯಲ್ಲಿ ಹಣಕಾಸು ವಲಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಬೇಕು. ಸರ್ಕಾರಿ ಪ್ರಾಯೋಜಿತ ಯೋಜನೆಗಳ ಮೂಲಕ ಮಹಿಳೆಯರಿಗೆ ಮಹಿಳಾ ಉದ್ಯಮಿಗಳಿಗೆ ಸೂಕ್ತವಾಗುವ ರೀತಿಯ ಹಣಕಾಸು ಯೋಜನೆಗಳನ್ನು ರೂಪಿಸಬೇಕು ಎಂದವರು ಅಭಿಪ್ರಾಯಪಟ್ಟರು.

ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಾಗಿರುವ ಮಹಿಳೆಯರನ್ನು ಬ್ಯಾಂಕ್ ಪ್ರತಿನಿಧಿಗಳಾಗಿ ನೇಮಿಸಲು ಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಬ್ಯಾಂಕುಗಳು ಪರಿಶೀಲಿಸಬೇಕಿದೆ ಎಂದವರು ಹೇಳಿದ್ದಾರೆ.

## ಕ್ಷಮೆ ಕೇಳಿದ ಕರಂದ್ಲಾಜೆ, ಪ್ರಕರಣ ರದ್ದು

ಚೆನ್ನೈ, ಸೆ. 5 - ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಕ್ಷಮೆ ಯಾಚಿಸಿದ ನಂತರ, ಅವರ ವಿರುದ್ಧದ ಅಪರಾಧಿಕ ಪ್ರಕರಣವನ್ನು ಮದ್ರಾಸ್ ಹೈಕೋರ್ಟ್ ರದ್ದುಗೊಳಿಸಿದೆ. ಕಳೆದ ಮಾರ್ಚ್ 1ರಂದು ಬೆಂಗಳೂರಿನ ಕೆಫೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ 10 ಜನ ಗಾಯಗೊಂಡಿದ್ದರು. ಈ ಘಟನೆಗೂ ತಮಿಳುನಾಡಿನ ವ್ಯಕ್ತಿಗಳಿಗೂ ಸಂಬಂಧ ಇದೆ ಎಂದು ಕರಂದ್ಲಾಜೆ ಹೇಳಿದ್ದರು. ಅವರ ಹೇಳಿಕೆಯ ವಿರುದ್ಧ ಮಧುರೈ ಪೊಲೀಸರು ಪ್ರಕರಣ ದಾಖಲಿಸಿದ್ದರು.

ನಂತರ ಹೈಕೋರ್ಟ್ ಎದುರು ಪ್ರಮಾಣ ಪತ್ರ ಒಂದನ್ನು ದಾಖಲಿಸಿದ್ದ ಕರಂದ್ಲಾಜೆ, ತಮ್ಮ ಹೇಳಿಕೆಗಾಗಿ ಕ್ಷಮೆಯಾಚಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಮುಂದುವರೆಯದಿರಲು ತಮಿಳುನಾಡು ಸರ್ಕಾರ ತಾತ್ವಿಕ ನಿರ್ಧಾರ ತೆಗೆದುಕೊಂಡಿದೆ. ನಂತರ ನ್ಯಾಯಾಲಯ ಪ್ರಕರಣವನ್ನು ರದ್ದುಗೊಳಿಸಿದೆ.

## ರಂಗೋಲಿ ಸ್ಪರ್ಧೆಯಲ್ಲಿ ಆಕರ್ಷಿಸಿದ ಅರ್ಥಶಾಸ್ತ್ರ..!



ದಾವಣಗೆರೆ, ಸೆ.4- ನಗರದ ಸೀತಮ್ಮ ಪಿಯು ಕಾಲೇಜಿನ ಅರ್ಥಶಾಸ್ತ್ರ ವಿಭಾಗದಿಂದ ಬುಧವಾರ ಆಯೋಜಿಸಿದ್ದ 'ಅರ್ಥಶಾಸ್ತ್ರದ ರೇಖಾ ಚಿತ್ರಗಳ ರಂಗೋಲಿ ಸ್ಪರ್ಧೆ' ಯಶಸ್ವಿಯಾಗಿ ನಡೆಯಿತು.

ವಿದ್ಯಾರ್ಥಿಗಳು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ರೀತಿಯ ನಕ್ಷೆ ಹಾಗೂ ಗ್ರಾಫ್‌ಗಳನ್ನು ಬಿಡಿಸುವ ಮೂಲಕ ಕಾಲೇಜಿನಲ್ಲಿ ಆಕರ್ಷಿಸಿದರು.

ಈ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ನಿರ್ದೇಶಕ ಕರಿಸಿದ್ದಪ್ಪ, ಪ್ರಾಚಾರ್ಯರ ಸಂಘದ ಜಿಲ್ಲಾಧ್ಯಕ್ಷ ಪ್ರದೀಪ್, ಷಂಶುದ್ದೀನ್ ಖಾನ್, ಮಾರುತಿ ಎನ್. ಹಾವೇರಿ, ನೆಲ್ಲೂರು ಪಿಯು ಕಾಲೇಜಿನ ಅರ್ಥಶಾಸ್ತ್ರ ವೇದಿಕೆಯ ಅಧ್ಯಕ್ಷ ನಾಗರಾಜ್, ಶಿವಾನಂದ ಎಂ. ಕುಡಪಲಿ, ನಗರದ ವಿವಿಧ ಕಾಲೇಜಿನ ಪ್ರಾಚಾರ್ಯರು ಹಾಗೂ ಕಾಲೇಜಿನ ಸಿಬ್ಬಂದಿ ಇದ್ದರು.

## ರೈಲ್ವೆ ಗುತ್ತಿಗೆ ಸಿಬ್ಬಂದಿಯಿಂದ ಕಳ್ಳತನ, ಪೀಡನೆ : ಪೊಲೀಸ್ ಪರಿಶೀಲನೆ ಕಡ್ಡಾಯಕ್ಕೆ ಆದೇಶ

ನವದೆಹಲಿ, ಸೆ. 5 - ರೈಲ್ವೆದಲ್ಲಿ ನೇಮಕಗೊಂಡ ಗುತ್ತಿಗೆ ಸಿಬ್ಬಂದಿ ದೊಡ್ಡ ಪ್ರಮಾಣದಲ್ಲಿ ಮಹಿಳೆಯರ ಪೀಡನೆ ಹಾಗೂ ಕಳ್ಳತನದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ನೇಮಕಕ್ಕೆ ಮುಂಚೆ ಪೊಲೀಸ್ ಪರಿಶೀಲನೆ ಕಡ್ಡಾಯವಾಗಿದೆ ಎಂದು ರೈಲ್ವೆ ಮಂಡಳಿ ತಿಳಿಸಿದೆ. ಹಲವು ನೇಮಕ ಪ್ರಕರಣಗಳಲ್ಲಿ ಪೊಲೀಸ್ ಪರಿಶೀಲನೆ ನಡೆಸದೆ ಇರುವುದು ಗಮನಕ್ಕೆ ಬಂದಿದೆ ಎಂದು ರೈಲ್ವೆ ಮಂಡಳಿ ಹೇಳಿದೆ. ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿ ದೊಡ್ಡ ಪ್ರಮಾಣದಲ್ಲಿ ಪ್ರಯಾಣಿಕರ ಸರಕುಗಳ ಕಳ್ಳತನ, ಲೈಂಗಿಕ ಪೀಡನೆ, ರೈಲ್ವೆ ಆಸ್ತಿಗಳ ಕಳ್ಳತನ ಮತ್ತಿತರೆ ಕೃತ್ಯಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ ಎಂದು ರೈಲ್ವೆ ಮಂಡಳಿ ಕಳೆದ ಆಗಸ್ಟ್ 20ರಂದು ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ರೈಲ್ವೆ ವಲಯಗಳು ಹಾಗೂ ಐಆರ್‌ಸಿಟಿಸಿ ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವಾಗ ಪೊಲೀಸ್ ಪರಿಶೀಲನೆ ಕೈಗೊಳ್ಳಬೇಕು. ಸಿಬ್ಬಂದಿಯ ಹಿನ್ನೆಲೆ ತಿಳಿದುಕೊಂಡಿರಬೇಕು ಎಂದು ರೈಲ್ವೆ ಮಂಡಳಿ ಹೇಳಿದೆ.

## ಭಾವಸಾರ ವಿಷನ್ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣೆ



ದಾವಣಗೆರೆ, ಸೆ.5- ಭಾವಸಾರ ವಿಷನ್ ಇಂಡಿಯಾ ಹಾಗೂ ಶ್ವಾಸಕೋಶ ತಜ್ಞ ಡಾ. ಅದೀಪ್ ಬಿ. ಅಂಬರಕರ್ ನೇತೃತ್ವದಲ್ಲಿ ಈಚೆಗೆ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಯಿತು.

ಡಾ. ಅದೀಪ್ ಅಂಬರಕರ್ ಮತ್ತು ತಂಡದಿಂದ ಅಸ್ತಮಾ, ದೀರ್ಘಾವಧಿಯ ಕೆಮ್ಮು, ದಮ್ಮು, ಕ್ಷಯ, ಅಲರ್ಜಿ, ಸಿಗರೇಟು ಹಾಗೂ ಧೂಳಿನಿಂದ ಉಂಟಾಗುವ ಉಸಿರಾಟದ ತೊಂದರೆಯಿರುವ 92 ಜನ ತಪಾಸಣೆಗೊಂಡರು.

ಕಾರ್ಯಕ್ರಮದಲ್ಲಿ ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಅಧ್ಯಕ್ಷ ರಘು ಮುಸಳೆ, ಸರಳ ಅಮಟೆ, ಬಿ.ವಿ.ಐ. ಮಾಜಿ ಗವರ್ನರ್ ಗೋಪಾಲ ನವಲೆ, ಹನುಮಂತರಾವ್ ಮಾಳದ ಕರ್, ವಾಗೀಶ್ ಬಾಬು ಗುಜ್ಜರ್, ಪದಾಧಿಕಾರಿಗಳಾದ ರಮೇಶ್ ಅಂಬರ್‌ಕರ್, ದಯಾನಂದ ಮಹೇಂದ್ರಕರ್, ಅನಸೂಯಾ ಗುಜ್ಜರ್, ಆರತಿ ಗುಜ್ಜರ್, ನಯನ ಅಂಬರ್‌ಕರ್ ಹಾಗೂ ಸದಸ್ಯರಾದ ಅನಿಲ್ ಮಾಳದಕರ್, ಶಿಲ್ಪಾ ಮಾಳದಕರ್, ಅರುಣ್ ಅಂಬರ್‌ಕರ್, ರಮೇಶ ಬಾಬು ಗುಜ್ಜರ್ ಇದ್ದರು.

## ನಾಳೆ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ, 21ಕ್ಕೆ ಶೋಭಾಯಾತ್ರೆ

ಮಲೇಬೆನ್ನೂರು



ಮಲೇಬೆನ್ನೂರು, ಸೆ. 5- ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ ನಾಡಿದ್ದು ಶನಿವಾರ 3ನೇ ವರ್ಷದ ಹಿಂದೂ ಮಹಾಗಣಪತಿಯನ್ನು ಪ್ರತಿಷ್ಠಾಪನೆ ಮಾಡಲಾಗುವುದೆಂದು ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ ತಿಳಿಸಿದರು.

ಮಹಾಗಣಪತಿ ಪ್ರತಿಷ್ಠಾಪಿಸುವ ಸ್ಥಳದಲ್ಲಿ ಗುರುವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಬೆಳಿಗ್ಗೆ 10 ಗಂಟೆಗೆ ಮಹಾಗಣಪತಿಯನ್ನು ಕಲ್ಲೇಶ್ವರ ದೇವಸ್ಥಾನದ ಬಳಿ ಇರುವ ಶಿಲ್ಪಿ ರಾಮಾಚಾರಿ ಅವರ ಮನೆಯಿಂದ ದುರ್ಗಾಂಬಿಕೆ ಕಲಾ ತಂಡದೊಂದಿಗೆ ಮೆರವಣಿಗೆ ಮೂಲಕ ನೀರಾವರಿ ಇಲಾಖೆ ಮೈದಾನಕ್ಕೆ ತಂದು ವಿಶೇಷ ಪೂಜೆಯೊಂದಿಗೆ ಪ್ರತಿಷ್ಠಾಪಿಸಲಾಗುವುದೆಂದರು.

ಎಂಟೂವರೆ ಅಡಿ ಎತ್ತರ ಇರುವ ಮಹಾಗಣಪತಿಯನ್ನು ಪುರಸಭೆ ಸದಸ್ಯ ಬಿ. ಮಂಜುನಾಥ್ ಅವರು ಕೊಡುಗೆಯಾಗಿ ನೀಡಿದ್ದು, ಮಹಾ ದ್ವಾರಕ್ಕೆ ವೀರ ಸಾವರ್ಕರ್, ವೇದಿಕೆಗೆ ಸನಾತನ ವೇದಿಕೆ, ಮಹಾಮಂಟಪಕ್ಕೆ ಬಾಲಗಂಗಾಧರ ತಿಲಕ್ ಅವರ ಹೆಸರನ್ನು ಇಡಲಾಗಿದೆ.

ನಾಡಿದ್ದು ದಿನಾಂಕ 7 ರಿಂದ ಇದೇ ದಿನಾಂಕ 20ರವರೆಗೆ ಪ್ರತಿದಿನ ಸಂಜೆ 8 ರಿಂದ ಮಲೇಬೆನ್ನೂರಿನ ಚೌಡೇಶ್ವರಿ ಭಜನಾ ಸಂಘ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ಭಜನಾ ತಂಡಗಳಿಂದ ಭಜನೆ ನಡೆಯಲಿದೆ.

ಇದೇ ದಿನಾಂಕ 14ರಂದು ಪಿಡಬ್ಲ್ಯೂಡಿ ಕ್ರಿಕೆಟರ್ಸ್ ವತಿಯಿಂದ ಮಧ್ಯಾಹ್ನ 2 ರಿಂದ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಮತ್ತು ಸಾಯಂಕಾಲ 4 ರಿಂದ ಬೆಂಗಳೂರಿನ ರವಿಕುಮಾರ್ ಅವರಿಂದ ಜಾದೂ ಪ್ರದರ್ಶನ, ಸಂಜೆ 5 ರಿಂದ ವಿವಿಧ ಶಾಲೆಗಳ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದಿನಾಂಕ 21ರಂದು ಹಿಂದೂ ಮಹಾಗಣಪತಿ ವಿಸರ್ಜನೆ ಅಂಗವಾಗಿ ಅಂದು ಬೆಳಿಗ್ಗೆ 10 ಕ್ಕೆ ಬೃಹತ್ ಶೋಭಾಯಾತ್ರೆ ನಡೆಯಲಿದ್ದು, 10 ರಿಂದ 15 ಸಾವಿರ ಜನ ಭಾಗವಹಿಸುವ ನಿರೀಕ್ಷೆ ಇದೆ. ಅಂದು ವಿವಿಧ ದಾನಿಗಳಿಂದ ಅನ್ನ ಸಂತರ್ಪಣೆಯ ವ್ಯವಸ್ಥೆ ಇರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಡೊಳ್ಳು, ಗೊಂಬೆ ಕುಣಿತ, ಕಹಳೆ ತಂಡಗಳು ಸೇರಿದಂತೆ ಬೆಂಗಳೂರಿನ ಖ್ಯಾತ ತಮಟೆ ಮೇಳ, ನಾಸಿಕ್ ಡೋಲ್, ಹಲಗೆ ಮತ್ತಿತರೆ ಕಲಾ ಮೇಳಗಳು ಶೋಭಾ ಯಾತ್ರೆಯಲ್ಲಿ ಭಾಗವಹಿಸಲಿವೆ ಎಂದು ಅಶೋಕ್ ಮಾಹಿತಿ ನೀಡಿದರು. ಹಿಂದೂ ಮಹಾಗಣೇಶೋತ್ಸವದ ಬಗ್ಗೆ ಮಲೇಬೆನ್ನೂರು ಹೋಬಳಿಯ 48 ಹಳ್ಳಿಗಳಿಗೂ ತೆರಳಿ ಗ್ರಾಮಸ್ಥರಿಗೆ ಕರ ಪತ್ರಗಳನ್ನು ನೀಡಿ ಆಮಂತ್ರಿಸಿದ್ದೇವೆ.

ಈ ಉತ್ಸವಕ್ಕೆ ಪಕ್ಷಾತೀತವಾಗಿ ಬೆಂಬಲ, ಸಹಕಾರ ಸಿಕ್ಕಿದ್ದು, ಶೋಭಾಯಾತ್ರೆ ಮೆರವಣಿಗೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಎಸ್. ರಾಮಪ್ಪ. ಹೆಚ್.ಎಸ್. ಶಿವಶಂಕರ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬಿ.ಎಂ. ವಾಗೀಶ್ ಸ್ವಾಮಿ, ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ. ಚಿದಾನಂದಪ್ಪ, ಸಿರಿಗೆರೆ ನಾಗನಗೌಡ್ರು, ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್, ಹನಗವಾಡಿ ಕುಮಾರ್, ನಿಖಿಲ್ ಕೊಂಡಜ್ಜಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಲಿದ್ದಾರೆಂದು ಸಮಿತಿಯ ಖಜಾಂಚಿ ಪಿ.ಆರ್. ರಾಜು ತಿಳಿಸಿದರು.

ಪುರಸಭೆ ಸದಸ್ಯರಾದ ಕೆ.ಜಿ. ಲೋಕೇಶ್, ಭೋವಿ ಶಿವು, ಚಿಟ್ಟಕ್ಕಿ ನಾಗರಾಜ್, ಎಕ್ಕೆಗೊಂದಿ ಕರಿಯಪ್ಪ, ಸುಬ್ಬಿ ರಾಜಪ್ಪ, ಎ.ಕೆ. ಲೋಕೇಶ್, ಎ.ಕೆ. ನಾಗರಾಜ್, ಜಿಗಳಿ ಹನುಮಗೌಡ, ಗೌಡ್ರ ನಿವಾಸ್, ಮೇದಾರ್ ರವಿ, ದೊರೆ, ಧೀರಜ್, ಸಂಜು, ಚಂದ್ರು, ಮಂಜು ಕಡೇಮನಿ, ದೇವರಾಜ್, ಹನುಮೇಶಿ, ಎ.ಕೆ. ಕಿರಣ್, ಸುನೀಲ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ರಕ್ಷಣಾ ಸಚಿವಾಲಯದ ಉದ್ಯೋಗಿಗಳಿಗೆ ಫಿಶಿಂಗ್ ವಂಚನೆ ಯತ್ನ

ನವದೆಹಲಿ, ಸೆ. 5 - ರಕ್ಷಣಾ ಸಚಿವಾಲಯದ ಅಧಿಕೃತ ವೆಬ್‌ಸೈಟ್ ಅಣಕು ಮಾಡುವ ಫಿಶಿಂಗ್ ವಂಚನೆಯನ್ನು ಸೈಬರ್ ಭದ್ರತಾ ಸಂಸ್ಥೆಗಳು ಪತ್ತೆ ಮಾಡಿವೆ. ನ್ಯಾಷನಲ್ ಇನ್‌ಫಾರ್ಮೆಟಿಕ್ಸ್ ಸೆಂಟರ್ ಈ ಬಗ್ಗೆ ಸಲಹೆ ಒಂದನ್ನು ನೀಡಿದ್ದು, ನಕಲಿ ವೆಬ್‌ಸೈಟ್ ಬಗ್ಗೆ ಎಚ್ಚರಿಕೆ ವಹಿಸುವಂತೆ ತಿಳಿಸಿದೆ. ಗೃಹ ಸಚಿವಾಲಯದ ವೆಬ್‌ಸೈಟ್ ಹೋಲುವ ಎರಡು ನಕಲಿ ವೆಬ್ ತಾಣಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ಲಾಗಿನ್ ಮಾಡುವ ಅಧಿಕಾರಿಗಳ ಸೂಕ್ಷ್ಮ ಮಾಹಿತಿ ಯನ್ನು ಕದಿಯಲಾಗುತ್ತಿದೆ ಎಂದು ಎಚ್ಚರಿಸಲಾಗಿದೆ. ಅಧಿಕಾರಿಗಳಿಗೆ ನಕಲಿ ವೆಬ್ ತಾಣಗಳಿಗೆ ಲಾಗಿನ್ ಮಾಡುವಂತೆ ಇಮೇಲ್ ಕಳಿಸಲಾಗುತ್ತಿದೆ. ಈ ಲಿಂಕ್ ಮೂಲಕ ಲಾಗಿನ್ ಆಗುವ ಅಧಿಕಾರಿಗಳ ಮಾಹಿತಿಯನ್ನು ಕದಿಯಲಾಗುತ್ತಿದೆ ಎಂದು ತಿಳಿಸಲಾಗಿದೆ.

## ಸದಸ್ಯತ್ವ ಸಂಖ್ಯೆ ಹೆಚ್ಚಿಸಿ, ಪಕ್ಷವನ್ನು ಬಲ ಪಡಿಸಿ

### ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಗಾಯತ್ರಿ ಸಿದ್ದೇಶ್ವರ ಮನವಿ



ಹೊನ್ನಾಳಿ

ಹೊನ್ನಾಳಿ, ಸೆ.5- ಬಿಜೆಪಿ ಪಕ್ಷವನ್ನು ಸದೃಢಗೊಳಿಸಲು ಮತ್ತು ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು, ಕಾರ್ಯಕರ್ತರು ಪಕ್ಷದ ಸದಸ್ಯತ್ವ ಸಂಖ್ಯೆ ಹೆಚ್ಚಿಸಬೇಕಿದೆ ಎಂದು ಬಿಜೆಪಿಯ ಪರಾಜಿತ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಪಟ್ಟಣದ ಗುರು ಭವನದಲ್ಲಿ ಬುಧವಾರ ಆಯೋಜಿಸಿದ್ದ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಕ್ಷವು 2014ರ ಲೋಕಸಭಾ ಚುನಾವಣೆಯಲ್ಲಿ 7500 ಮತಗಳಿಂದ ಮುನ್ನಡೆ ಸಾಧಿಸಿದ್ದರೇ 2019ರಲ್ಲೂ 13 ಸಾವಿರ ಮತಗಳಿಂದ ಮುನ್ನಡೆ ಸಾಧಿಸಿತ್ತು. ಆದರೆ ಕಳೆದ ಚುನಾವಣೆಯಲ್ಲಿ 7 ಸಾವಿರ ಮತಗಳ ಹಿನ್ನಡೆ ಕಂಡಿದ್ದರೂ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರು ಮತ್ತು ಮತದಾರರ ಬೆಂಬಲದಿಂದ ಇಷ್ಟೊಂದು ಮತಗಳು ಬರಲು ಸಾಧ್ಯವಾಯಿತು ಎಂದ ಅವರು, ಸೋಲಿಗೆ ಕುಗ್ಗದೆ ಪಕ್ಷವನ್ನು ಬಲಪಡಿಸೋಣ ಎಂದರು.

ತಾಲ್ಲೂಕು ಮಾಜಿ ಅಧ್ಯಕ್ಷ ಅರಕೆರೆ ಎ.ಬಿ ಹನುಮಂತಪ್ಪ ಮಾತನಾಡಿ, ಹೆಚ್ಚು ಸದಸ್ಯತ್ವ ಹೊಂದಿದ ಪ್ರಜಾಪ್ರಭುತ್ವದ ಅತೀ ದೊಡ್ಡ ಪಕ್ಷದಲ್ಲಿ ಸದಸ್ಯತ್ವ ಹೊಂದಿದ್ದು ಹೆಮ್ಮೆಯ ಸಂಗತಿ. ತಾಲ್ಲೂಕಿನಲ್ಲಿ 1 ಲಕ್ಷ ಸದಸ್ಯತ್ವದ ಗುರಿ ಸಾಧಿಸೋಣ ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಎಂ.ಆರ್. ಮಹೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಕಳೆದ ಬಾರಿ ಪಕ್ಷವು 80 ಸಾವಿರ ಸದಸ್ಯತ್ವ ಹೊಂದಿತ್ತು. ಆದರೆ ಕಾರ್ಯಕರ್ತರಲ್ಲಿನ ಅತಿಯಾದ ವಿಶ್ವಾಸವೇ ಅಭ್ಯರ್ಥಿ ಸೋಲಿಗೆ ಕಾರಣವಾಗಿದೆ ಎಂದರು.

ತಾಲ್ಲೂಕಿನಲ್ಲಿ ಬಿಜೆಪಿ ಕಚೇರಿ ನಿರ್ಮಾಣಕ್ಕೆ ಜಾಗ ಖರೀದಿಸಲು ಮುಂದಾಗಬೇಕು ಎಂದು ಹೇಳಿದರು.

ಈ ವೇಳೆ ದೀಪಾ ಜಗದೀಶ್, ಕೆ.ವಿ. ಚೆನ್ನಪ್ಪ, ಶಾಂತರಾಜ್ ಪಾಟೀಲ್ ಮಾತನಾಡಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ನ್ಯಾಮತಿ ಪಿ.ಕೆ ರವಿ, ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮುಖಂಡರಾದ ನೆಲಹೊನ್ನೆ ದೇವರಾಜ್, ನ್ಯಾಮತಿ ನಟರಾಜ್, ಯಕ್ಕನಹಳ್ಳಿ ಜಗದೀಶ್ ಮತ್ತಿತರರಿದ್ದರು.

## ಅಂಗನವಾಡಿ ಕಾರ್ಯಕರ್ತೆ : ಅರ್ಜಿ ಆಹ್ವಾನ

ದಾವಣಗೆರೆ, ಸೆ. 5 - ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಚನ್ನಗಿರಿ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 16 ಅಂಗನವಾಡಿ ಕಾರ್ಯಕರ್ತೆ ಹಾಗೂ 52 ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 10 ವರೆಗೆ ವಿಸ್ತರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.


## ಪುರಸಭಾ ಕಾರ್ಯಾಲಯ ಹೊನ್ನಾಳಿ - 577217

ಜಿಲ್ಲೆ, ದಾವಣಗೆರೆ, ರಾಜ್ಯ : ಕರ್ನಾಟಕ

Website: http://www.honnalitown.mrc.gov.in
Phone: 08188-251021, Email: HYPERLINK
"mailto:itstaff_ulb_honnali@yahoo.in

ಕ್ರಮಾಂಕ: ಹೊಪು/ಉಈ/ಸಿಆರ್/06/2024-25 ದಿನಾಂಕ: 04-09-2024

### 'ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ'

ಪುರಸಭೆ ಹೊನ್ನಾಳಿಯ 2024-25ನೇ ಸಾಮಾನ್ಯ ನಿಧಿಯಡಿಯಲ್ಲಿ ನೀರು ಸರಬರಾಜು ಶಾಖೆಯ ಸಾಮಗ್ರಿಗಳ ಸರಬರಾಜು ಮಾಡಲು ಅರ್ಹ ನೋಂದಾಯಿತ ಸರಬರಾಜುದಾರ/ಗುತ್ತಿಗೆದಾರರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಗಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ (KW-1 and KG-1) ನಿಯಮಾವಳಿಗಳಂತೆ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ (https://kppp.karnataka.gov.in)ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂರ್ಪಕಿಸಿ ಮಾಹಿತಿ ಪಡೆಯಬಹುದು.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಕಾಲಾವಧಿ |
|---|---|---|---|---|
| 2024-25ನೇ ಸಾಲಿನ ಸಾಮಾನ್ಯ ನಿಧಿ | | | | |
| 01 | Annual Tenders for Water Supply Spare Parts for Town Muncipal Council Honnali (DMA/2023-24/IND0975/Call-5) | 12.00 | 30,000-00 | 12 ತಿಂಗಳು |
| 02 | ವಾರ್ಡ್ ನಂ 5 ರ ದುರ್ಗಿಗುಡಿ ದಕ್ಷಿಣ ಭಾಗದ 4ನೇ ಕ್ರಾಸ್ ಅಂಗನವಾಡಿ ಪಕ್ಕ ಸಿ.ಡಿ. ನಿರ್ಮಾಣ ಮತ್ತು ಹಿರೇಮಠ ಎಲ್.ಐ.ಸಿ. ಬಡಾವಣೆ ಹತ್ತಿರ ಸ್ಲ್ಯಾಬ್ ನಿರ್ಮಾಣ. (DMA/2024-25/IND28766) | 1.90 | 4,750-00 | 03 ತಿಂಗಳು |

ಇ-ಪ್ರಕ್ಯೂರ್‌ಮೆಂಟ್ ಪ್ರಕಾರ ಟೆಂಡರ್ ಸಲ್ಲಿಸಲು ಕೊನೆಯ ದಿ: 12.09.2024 ರ ಸಾಯಂಕಾಲ 5.30 ಗಂಟೆಯವರಗೆ, ಟೆಂಡರ್ ತೆರೆಯುವ ದಿನಾಂಕ : 14.09.2024 ಬೆಳಗ್ಗೆ 11.00 ಗಂಟೆಗೆ ಪುರಸಭೆ ಹೊನ್ನಾಳಿ ಕಾರ್ಯಾಲಯದಲ್ಲಿ ತೆರೆಯಲಾಗುವುದು. ಅನುದಾನದ ಲಭ್ಯತೆಗೆ ತಕ್ಕಂತೆ ಕಾರ್ಯಾದೇಶವನ್ನು ನೀಡಿ ಕ್ರಮ ವಹಿಸಲಾಗುವುದು.

ಸಹಿ/- ಆಡಳಿತಾಧಿಕಾರಿಗಳು
ಪುರಸಭೆ, ಹೊನ್ನಾಳಿ

ಸಹಿ/- ಮುಖ್ಯಾಧಿಕಾರಿಗಳು
ಪುರಸಭೆ, ಹೊನ್ನಾಳಿ.

# ಸ್ವರ್ಣಗೌರಿ ಒಂದು ಚಿಂತನೆ



ಸ್ವರ್ಣ ಗೌರಿ ಕಥೆಯಲ್ಲಿ ಬರುವ ಹಾಗೆ, ಕಿರಿಯ ರಾಣಿ ತಾತ್ಸಾರದಿಂದ ಪೂಜೆಯ ದಾರವನ್ನು ಒಣಗಿದ ಮರದ ಮೇಲೆ ಹಾಕಿದಾಗ, ಮರ ಚಿಗುರಿದ್ದನ್ನು ನೋಡಿ, ಹಿರಿಯರಾಣಿ ಅದನ್ನು ಕಟ್ಟಿಕೊಂಡು ಪೂಜೆ ಮಾಡಿದ್ದರಿಂದ, ಅವಳಿಗೆ ಪತಿಯ ಪ್ರೀತಿ ಮತ್ತು ಎಲ್ಲ ಭಾಗ್ಯಗಳು ಸಿಗುತ್ತದೆ, ಕಿರಿಯ ರಾಣಿಗೆ ಅವಮಾನಿಸಿದ ಅಪರಾಧದಿಂದ ಬಹಳ ಕಷ್ಟಗಳು ಬರುತ್ತವೆ. ಗೌರಿ ದೇವಿಯ ಈ ಪೂಜೆಯನ್ನು ಮಾಡುವ ಎಲ್ಲರಿಗೂ ಸನ್ಮಂಗಳವಾಗುತ್ತದೆ. ತವರಿಗೆ ಬಂದ ಹೆಣ್ಣು ಮಗಳು ಹೇಗೆ ತನ್ನ ತವರಿಗೆ ಎಲ್ಲ ಒಳ್ಳೆಯದಾಗಲಿ ಎಂದು ಹರಸಿ, ಹೋದಾಗ ಅಣ್ಣನಿಗೆ ತವರುಮನೆಗೆ ಎಲ್ಲ ಒಳ್ಳೆಯದಾಗುತ್ತದೋ ಹಾಗೆ ಸಾಕ್ಷಾತ್ ದೇವಿಯೇ ಮನೆಗೆ ಬಂದು ಹೋದಾಗ, ಎಲ್ಲರಿಗೂ ಒಳ್ಳೆಯದಾಗುವುದರಲ್ಲಿ ಸಂಶಯವೇ ಇಲ್ಲ ಅಲ್ಲವೇ?

### 'ಸರ್ವ ಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೆ ಶರಣ್ಯೇ ತ್ರ್ಯಯಂಬಕೆ ಗೌರಿ ನಾರಾಯಣಿ ನಮೋಸ್ತುತೆ'

ಇದು ಜಗದಂಬೆಗೆ ನಾವು ಮಾಡುವಂತಹ ಸ್ತೋತ್ರ. ಸರ್ವ ಮಂಗಳ ಎಂದರೆ ಯಾವಾಗಲೂ ಮಂಗಳಕರವಾಗಿರುವವಳು, ಎಲ್ಲರಿಗೂ ಎಲ್ಲಾ ಕಾಲದಲ್ಲೂ ಮಂಗಳವನ್ನೇ ಮಾಡುವವಳು. ಅವಳಿರುವ ಜಾಗದಲ್ಲಿ ಅಮಂಗಳವು ಇರುವುದೇ ಇಲ್ಲ. ಸಚ್ಚಿದಾನಂದ ಸ್ವರೂಪಳು. ತನ್ನನ್ನು ಆರಾಧಿಸುವ ಭಕ್ತರಿಗೆ ಆನಂದವನ್ನು ನೀಡುವವಳು, ಮಂಗಳವನ್ನು ಮಾಡುವವಳು ಎಂದರೆ ಅವರಿಗೆ ಅವರ ಕರ್ಮಫಲದ ಪ್ರಕಾರ ಒಳ್ಳೆಯದನ್ನು ಮಾಡುವಳು.

ಶಿವೆ ಎಂದರೆ ಶಿವನ ಪತ್ನಿ. ಶಿವ ಎಂದರೆ ಮಂಗಳಕರ. ಆದ್ದರಿಂದ ಶಿವೆಯೂ ಮಂಗಳವನ್ನು ಮಾಡುವವಳು ಎಂಬುದೇ ಅರ್ಥ.

ಮಾಂಗಲ್ಯೇ ಎನ್ನುವ ಒಂದು ಪದವಿದೆ. ಮಾಂಗಲ್ಯ ಭಾಗ್ಯ ಕೊಡುವವಳು ಎಂದರೆ ಒಳ್ಳೆಯ ಪತಿ ಅಥವಾ ಪತ್ನಿಯನ್ನು ಮಕ್ಕಳಿಗೆ ದಯಪಾಲಿಸಿ ವಂಶಾಭಿವೃದ್ಧಿ ಮಾಡುವವಳು ಎಂಬುದು ಒಂದಾದರೆ, ಮಾಂಗಲ್ಯವನ್ನು ಸಂರಕ್ಷಿಸುವವಳು ಎಂದರೆ ದೀರ್ಘ ಸೌಮಾಂಗಲ್ಯವನ್ನು ತನ್ನನ್ನು ಪೂಜೆ ಮಾಡುವ ಭಕ್ತರಿಗೆ ನೀಡುವವಳು ಎಂದೂ ತಿಳಿಯಬಹುದು.

ಸರ್ವಾರ್ಥಸಾಧಕೆ ಎಂದರೆ ಏನೇನು ಅಪೇಕ್ಷೆ ಇದೆಯೋ ಎಲ್ಲವನ್ನೂ ಪೂರ್ಣ ಮಾಡುವವಳು. ಲಲಿತಾ ಸಹಸ್ರನಾಮದಲ್ಲಿ "ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಸ್ವರೂಪಿಣಿ" ಎಂಬ ಒಂದು ನಾಮವಿದೆ. ನಾವು ಏನನ್ನಾದರೂ ಸಾಧಿಸಬೇಕಾದರೆ ಮೊದಲು ಅದನ್ನು ಮಾಡಬೇಕೆಂಬ ಇಚ್ಛೆ ನಮ್ಮಲ್ಲಿ ಬರಬೇಕು, ಅದನ್ನು ಹೇಗೆ ಮಾಡಬೇಕು ಎಂಬ ಜ್ಞಾನದ ಬೆಳಕು ನಮಗೆ ಮಾರ್ಗದರ್ಶನ ಮಾಡಬೇಕು. ನಮಗೆ ಬಂದ ಆ ಚಿಂತನೆ, ಕಾರ್ಯವಾಗಿ ಮಾರ್ಪಾಡಾಗಬೇಕಾದರೆ ಅದಕ್ಕೆ ಕ್ರಿಯಾಶಕ್ತಿ ಬೇಕು. ಈ ಮೂರನ್ನು ದಯಪಾಲಿಸುವವಳು ಆ ಜಗನ್ಮಾತೆ ಆದ್ದರಿಂದಲೇ ಅವಳಿದ್ದಲ್ಲಿ ಎಲ್ಲಾ ಸಾಧನೆಗಳು ಆಗುತ್ತವೆ. ಭಕ್ತರಿಗೆ ಬೇಕಾದ ಪ್ರತಿಯೊಂದು ಕೂಡ ದೇವಿಯ ಅನುಗ್ರಹವಾದರೆ ಲಭಿಸಿಯೇ ಲಭಿಸುತ್ತದೆ.

ಶರಣ್ಯೇ ಎಂದರೆ ಶರಣಾದವರನ್ನು ಸಂರಕ್ಷಿಸುವವಳು, ಶರಣಾಗತ ರಕ್ಷಕಿ. ಯಾರು 'ನೀನಲ್ಲದೆ ನನಗೆ ಬೇರೆ ಗತಿ ಇಲ್ಲ' ಎಂದು ಆ ದೇವಿಯ ಪಾದವನ್ನು ಹೃದಯದಲ್ಲಿ ಗಟ್ಟಿಯಾಗಿ ಹಿಡಿದುಕೊಳ್ಳುತ್ತಾರೋ ಅವರನ್ನು ಕೈ ಬಿಡದೆ ಕಾಪಾಡುತ್ತಾಳೆ. ಆದ್ದರಿಂದಲೇ ಅವಳು ಶರಣಾಗತ ವತ್ಸಲೇ, ಕೃಪಾ ಸಾಗರಿ, ತಾಯಿ. 'ತಾಯಿ', 'ಅಮ್ಮ' ಎನ್ನುವ ಶಬ್ದವೇ ಅವಳಲ್ಲಿರು ವಂತಹ ವಾತ್ಸಲ್ಯ ಮತ್ತು ಕಾರುಣ್ಯವನ್ನು ತೋರಿಸುತ್ತದೆ.

ತ್ರಯಂಬಕೇ ಎಂದರೆ ಮೂರು ಕಣ್ಣುಳ್ಳವನಾದ ಶಿವನಿಗೆ ತ್ರಯಂಬಕ ಎಂದು ಹೆಸರು. ಆ ತ್ರಯಂಬಕನ ಪತ್ನಿ ಎಂದು ಅರ್ಥೈಸಿಕೊಳ್ಳಬಹುದು, ಅಥವಾ ತಾನೇ 3 ಕಣ್ಣುಗಳನ್ನು ಹೊಂದಿರುವ ದುರ್ಗಾದೇವಿ ಎಂದು ಧ್ಯಾನ ಮಾಡಬಹುದು. ಮೂರು ಕಣ್ಣುಗಳು ಸೂರ್ಯ ಚಂದ್ರ ಮತ್ತು ಅಗ್ನಿಗಳಿಗೆ ಸಂಕೇತ. ಮೂರನೇ ಕಣ್ಣು ಹುಬ್ಬುಗಳ ಮಧ್ಯೆ ಇದ್ದು ಅದನ್ನು ತೆಗೆದರೆ ಅಗ್ನಿಯು ಹೊರಬಂದು ಭಸ್ಮ ಮಾಡುತ್ತಾನೆ. ಮನ್ಮಥನನ್ನು ಪರಶಿವನ ಮೂರನೇ ಕಣ್ಣಿನಿಂದಲೇ ಭಸ್ಮ ಮಾಡಿದ್ದು. ಈ ಶಕ್ತಿ ದೇವಿಗೂ ಇದೆ.

ಗೌರಿ ಎಂದರೆ ಅತ್ಯಂತ ಬೆಳ್ಳಗಿರುವಂತಹ ಸುಂದರವಾದ ಸ್ವರೂಪ. ಪಾರ್ವತಿಯ ಕಥೆಯಲ್ಲಿ, ಅವಳು ಪರಶಿವನನ್ನು ಮದುವೆ ಆದಾಗ ಕಪ್ಪಾಗಿದ್ದಳೆಂದು, ಅವಳನ್ನು ಕಾಲಿ ಎಂದು ಶಿವನು ಕರೆದಿದ್ದನೆಂದು, ತಾನು ಗೌರ ವರ್ಣವನ್ನು ಪಡೆದುಕೊಳ್ಳುವುದಕ್ಕಾಗಿ ಅವಳು ತಪಸ್ಸನ್ನು ಆಚರಿಸಿ ಅತ್ಯಂತ ಸುಂದರ ಹೊಳೆಯುವ ಗೌರ ವರ್ಣದ ಗೌರಿಯಾದಳೆಂದು ನಂಬಿಕೆ ಇದೆ. ಪರಶಿವನನ್ನೇ ಪತಿಯಾಗಿ ಪಡೆಯಬೇಕೆಂದು ತಪಸ್ಸು ಮಾಡಿದಂತಹ ದೇವಿ ಕೇವಲ ಪತ್ರೆಗಳನ್ನು(ಎಲೆಗಳು) ಸ್ವೀಕರಿಸಿದಾಗ "ಸುಪರ್ಣೆ" ಎನಿಸಿಕೊಂಡಳು, ಅದನ್ನೂ ನಿಲ್ಲಿಸಿದಾಗ "ಅಪರ್ಣೆ" ಎನಿಸಿಕೊಂಡಳು.

ನಾರಾಯಣಿ ನಮೋಸ್ತುತೆ ಎಂದರೆ ನಾರಾಯಣನ ತಂಗಿಯಾದ ಓ ತಾಯಿಯೆ ನಿನಗೆ ನಮಸ್ಕಾರ.ಎಂದು ಅರ್ಥ. ನಮಸ್ಕಾರ ಎಂದರೆ, ನಿನಗೆ ನನ್ನ ಎಲ್ಲವೂ ಅರ್ಪಿತ ಎಂಬ ಶರಣಾಗತಿ.

ಹೀಗೆ ಆ ತಾಯಿಯ ಜೀವನ ಛಲದಿಂದ ಜ್ಞಾನದಿಂದ ಶಕ್ತಿಯಿಂದ ಏನು ಬೇಕಾದರೂ ಸಾಧಿಸಬಹುದು ಎಂಬ ಆತ್ಮ ಶಕ್ತಿಯಿಂದ ತುಂಬಿದೆ. ಇದು ನಮಗೂ ಏನೇ ಕಷ್ಟ ಬಂದರೂ ಧೃತಿಗೆಡದೆ ಅದರಿಂದ ಹೊರಬರುವ ಮಾರ್ಗವನ್ನು ಒಂದೇ ಮನಸ್ಸಿನಿಂದ ಯೋಚನೆ ಮಾಡಿ ಹೊರ ಬರಬಹುದು ಎಂಬ ಸಕಾರಾತ್ಮಕ ಚಿಂತನೆಯನ್ನು ನೀಡುತ್ತದೆ, ಸ್ಫೂರ್ತಿಯನ್ನು ನೀಡುತ್ತದೆ.

ಇಂತಹ ಸ್ವರ್ಣ ಗೌರಿ ವ್ರತ, ಭಾದ್ರಪದ ಮಾಸದ ಶುಕ್ಲ ಪಕ್ಷದ ತದಿಗೆ ದಿನ ಬರುತ್ತದೆ. ಇದು ತಾಯಿ ಗೌರಮ್ಮ ತನ್ನ ತವರು ಮನೆಗೆ ಬರುವ ಪ್ರತೀಕವಾಗಿದೆ. ಮಗಳು ಮನೆಗೆ ಬಂದರೆ ಮನೆಯವರಿಗೆ ಎಷ್ಟು ಸಂಭ್ರಮ ಎಷ್ಟು ಸಡಗರ, ತಾಯಿ ಇದ್ದರಂತೂ, ಯಾವ ಕೆಲಸವನ್ನು ಮಾಡಲು ಬಿಡದೆ, ಮುದ್ದು ಮಾಡಿ ತಲೆ ಸ್ನಾನ ಮಾಡಿಸಿ ರುಚಿಯಾದ ಅಡುಗೆಯನ್ನು ಬಡಿಸಿ ಆನಂದಿಸುತ್ತಾಳೆ.

ಹಾಗೆಯೇ ವರ್ಷಕ್ಕೊಮ್ಮೆ ಬರುವ ಗೌರಮ್ಮನನ್ನು ಸಡಗರ ಸಂಭ್ರಮದಿಂದ ಎಲ್ಲರೂ ಬರ ಮಾಡಿಕೊಳ್ಳುತ್ತಾರೆ, ಮನೆಯ ಮುಂದೆ ತೋರಣ ರಂಗೋಲಿ ಚಪ್ಪರ, ಗೌರಿ ದೇವಿಯನ್ನು ಕೂರಿಸಲು ಸುಂದರವಾದಂತಹ ಮಂಟಪ, ಅದರ ಮುಂದೆ ಚಿತ್ರ ವಿಚಿತ್ರವಾದ ರಂಗೋಲಿ ಧೂಪಗಳು ದೀಪಗಳು ವಿಧ ವಿಧವಾದ ಆರತಿಗಳು ಹಣ್ಣುಗಳು ಎಲ್ಲವನ್ನು ಸಜ್ಜು ಮಾಡುತ್ತಾರೆ.

ಮನೆಗೆ ಬಂದಿರುವಂತಹ ಮಗಳಾದ್ದರಿಂದ ಬಾಗಿನ ಕೊಡುವ ಸಂಪ್ರದಾಯವಿದೆ ಸೋಬಲಕ್ಕಿ ಅಥವಾ ಮಡಿಲಕ್ಕಿ ಎಂದು ಉಡಿ ತುಂಬುವ ಸಂಪ್ರದಾಯವಿದೆ. ಕೇವಲ ಗೌರಿ ದೇವಿಗೆ ಅಲ್ಲದೆ ಮನೆಯ ಹೆಣ್ಣು ಮಕ್ಕಳು, ಸೊಸೆಯಂದಿರು ,ಮನೆಯ ಒಡತಿ, ಮನೆಗೆ ಕೆಲಸಕ್ಕೆ ಬರುವವರು, ಅಕ್ಕತಂಗಿಯರು ,ಅತ್ತಿಗೆ ನಾದಿನಿಯರು ಎಲ್ಲರಿಗೂ ಕೂಡ ಗೌರಿ ಹಬ್ಬದ ಅರಿಶಿನ ಕುಂಕುಮ ಕೊಡುವ ಸಂಪ್ರದಾಯವಿದೆ. ಇದಲ್ಲದೆ ಗೌರಿ ಪೂಜೆ ಮಾಡಿದವರು ಮರದ ಬಾಗಿನದಲ್ಲಿ ಒಂದು ದಿನದ ಅಡಿಗೆಗೆ ಆಗುವ ಎಲ್ಲಾ ಪದಾರ್ಥಗಳನ್ನು, ಸೀರೆ ಅಥವಾ ರವಿಕೆ ಕಣವನ್ನು, ಶೃಂಗಾರದ ಪದಾರ್ಥಗಳಾದ ಅರಿಶಿಣ ಕುಂಕುಮ ಕಾಡಿಗೆ ಬಳೆ ಬಿಚ್ಚೋಲೆ ಬಾಚಣಿಗೆ ಕನ್ನಡಿ, ಎಲ್ಲವನ್ನು ಇಟ್ಟು ಮುಚ್ಚಿ ಮುತ್ತೈದೆಯರಿಗೆ ಬಾಗಿನ ಕೊಡುವ ಸಂಪ್ರದಾಯವಿದೆ.

ಬಾಗಿನ ಕೊಡುವ ಮುತ್ತೈದೆಯಲ್ಲಿ ಭಗವತಿಯನ್ನು ನೋಡುವ ಒಂದು ದಿವ್ಯವಾದಂತಹ ಸಂಪ್ರದಾಯ ನಮ್ಮದಾಗಿದೆ. ಹೊರಗಿರುವ ದೇಹಕ್ಕೆ ಪ್ರಾಮುಖ್ಯತೆ ಇಲ್ಲ ಒಳಗಿರುವ ಆತ್ಮಕ್ಕೆ ಮಾತ್ರ ಪ್ರಾಮುಖ್ಯತೆ. ಆದ್ದರಿಂದಲೇ ಬಾಗಿನ ಕೊಟ್ಟ ನಂತರ ನಮಸ್ಕರಿಸುತ್ತೇವೆ. "ಓ ತಾಯಿ ಎಲ್ಲವೂ ನಿನ್ನದೇ ನಿನ್ನದನ್ನು ನಿನಗೆ ಅರ್ಪಿಸಿದ್ದೇನೆ. ನಿನ್ನಲ್ಲಿ ಶರಣಾಗಿದ್ದೇನೆ ನನ್ನನ್ನು ಕಾಪಾಡು" ಎಂಬ ಪ್ರಾರ್ಥನೆ ಎಲ್ಲರ ಮನಸ್ಸಿನಲ್ಲಿ ಇರುತ್ತದೆ

ಗೌರಮ್ಮನ ಪೂಜೆ ಮಾಡುವಾಗ 16 ಗಂಟಿನ 16 ಎಳೆ ದಾರಕ್ಕೆ ದೇವಿಯ 16 ನಾಮಗಳನ್ನು ಹೇಳುತ್ತಾ ಪೂಜೆ ಮಾಡಿಸುತ್ತಾರೆ. ಈ ದಾರವನ್ನು ಪತಿಯು ಪತ್ನಿಗೆ ಕಟ್ಟಿ, ವ್ರತವನ್ನು ಸಂಪನ್ನಪಡಿಸುತ್ತಾನೆ. ಪತ್ಯಂತರಗತನಾದ ಪರಮಾತ್ಮನು ದೇವಿಯ ಆಶೀರ್ವಾದವನ್ನು ನಮಗೆ ನೀಡುವ ಸಂಕೇತವೇ ಈ ದೋರ ಬಂಧನ. ಕಣ್ಣಿಗೆ ಕಾಣದ ದೇವಿಯ ಆಶೀರ್ವಾದವು ಕಾಣಿಸುವ ದಾರದ ರೂಪದಲ್ಲಿ ನಮ್ಮ ಕೈಯಲ್ಲಿ ಒಂದು ಹೂವಿನ ಜೊತೆ ಬಂಧಿಯಾಗಿ ಹೊಳೆಯುತ್ತದೆ.

16 ವರ್ಷ ಗೌರಿದೇವಿ ಶಿವನಿಗಾಗಿ ತಪಸ್ಸನ್ನು ಆಚರಿಸಿದಳು. ಅದರ ಪ್ರತೀಕವಾಗಿ ಹದಿನಾರರ ಸಂಖ್ಯೆಗೆ ಬಹಳ ಮಹತ್ವವಿದೆ. 16 ಎಲೆ 16 ಅಡಿಕೆಯ ಮೇಲೆ 16 ಎಳೆದಾರವನ್ನು ಇಟ್ಟು ಪೂಜಿಸಲಾಗುತ್ತದೆ. 16 ಎಳೆ ಗೆಜ್ಜೆ ವಸ್ತ್ರ, ಹದಿನಾರು ದೀಪದ ಆರತಿ,16 ಅರ್ಘ್ಯಗಳನ್ನು ಬಿಟ್ಟು ವ್ರತ ಸಂಪನ್ನ ಮಾಡಲಾಗುತ್ತದೆ 16 ನೈವೇದ್ಯ ,16ನಮಸ್ಕಾರಗಳು ದೇವಿಗೆ ಬಹಳ ಶ್ರೇಷ್ಠ ."ಶ್ರೀಷೋಡಷಾಕ್ಷರೀ ಮಂತ್ರ" ಎಂದು 16 ಅಕ್ಷರದ ಮಂತ್ರದಿಂದಲೂ ಅವಳು ಪ್ರತಿಪಾದ್ಯಳಾಗಿದ್ದಾಳೆ. 16 ವರ್ಷದ ಪೂಜೆ ಮಾಡಿದ ಮೇಲೆ ಉದ್ಯಾಪನೆ ಮಾಡುವ ಸಂಪ್ರದಾಯವು ಇದೆ.ಆದರೆ ಈ ವ್ರತವು ಆಜನ್ಮ ವ್ರತವೆಂದು, ಪ್ರತಿಯೊಬ್ಬರೂ ಜಾತಿ ಮತ ಭೇದವಿಲ್ಲದ ಹಾಗೆ ಆಚರಿಸುತ್ತಾರೆ. ತಮ್ಮ ಮನೆಯಲ್ಲಿ ಗೌರಿಯನ್ನು ಕೂಡಿಸುವ ಸಂಪ್ರದಾಯವಿಲ್ಲದಿದ್ದರೂ, ಗೌರಿ ವ್ರತವನ್ನು ಮಾಡುವವರ ಮನೆಗೆ ಹೋಗಿ ಪೂಜೆ ಮಾಡಿ ಬಾಗಿನ ಕೊಡುವ ಸಂಪ್ರದಾಯವಿದೆ.

ದಕ್ಷಿಣ ಕರ್ನಾಟಕದಲ್ಲಿ, ಸ್ವರ್ಣ ಗೌರಿ ವ್ರತ ಹಬ್ಬವಾಗಿ ಆಚರಿಸಲ್ಪಡುತ್ತದೆ. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮತ್ತು ಉತ್ತರ ಭಾರತದ ಅನೇಕ ಭಾಗಗಳಲ್ಲಿ, 'ಹರ್ತಾಳ ಗೌರಿ' ಅಥವಾ 'ಹರ್ ವ್ರತ್' ಎಂದು ಆಚರಿಸುತ್ತಾರೆ

ಅವರು ಇಡೀ ದಿನ ಉಪವಾಸವಿದ್ದು ಗೌರಿ ದೇವಿಯನ್ನು ಸೌಮಾಂಗಲ್ಯಕ್ಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಅಂದು ನಿರ್ಜಲ ಉಪವಾಸ (ಎಂದರೆ ನೀರು ಕುಡಿಯದೆ) ಮಾಡುವವರನ್ನು ಕೂಡ ನಾವು ಲಕ್ನೋದಲ್ಲಿ ಇರುವಾಗ ನೋಡಿದ್ದೇವು. ಇಂತಹ ಶಕ್ತಿ ಸ್ವರೂಪಿಣಿಯಾದ ತಾಯಿಯು ನಮಗೆ ಒಳ್ಳೆಯ ಕೆಲಸಗಳನ್ನು ಮಾಡಲು ಶಕ್ತಿಯನ್ನು ತುಂಬಲಿ, ನಮ್ಮಲ್ಲಿ ಪ್ರೀತಿ ವಿಶ್ವಾಸ ಸಾಮರಸ್ಯ ಸಂತೋಷ ತುಂಬಿ ಸತ್ಪ್ರಜೆಗಳನ್ನು ಕರುಣಿಸಲಿ. ನಮ್ಮ ಸಂಸ್ಕೃತಿ ನಮ್ಮ ಧರ್ಮದ ವಿಶೇಷತೆಗಳನ್ನು ಅರಿಯುವ ಅರಿತು ಆಚರಿಸುವ, ಕ್ಷಯಿಸದಂತೆ ಕಾಪಾಡುವ ಗಟ್ಟಿ ಮನಸ್ಸು ಮತ್ತು ಹೆಮ್ಮೆಯ ಅಭಿಮಾನ ನಮ್ಮ ಮುಂದಿನ ಪೀಳಿಗೆಗಳಲ್ಲಿ ಉಳಿಸಿ ಬೆಳೆಸಲಿ. ಅಕ್ಕ ತಮ್ಮ ಅಣ್ಣ ತಂಗಿಯರ ಪ್ರೀತಿ ಹೆಚ್ಚಾಗಲಿ. ಎಲ್ಲ ಹೆಣ್ಣು ಮಕ್ಕಳಿಗೂ ಪ್ರೀತಿ ಪಡುವ ಸುಂದರ ತವರು ಸದಾ ಇರಲಿ ಎಂದು ಪ್ರಾರ್ಥಿಸುತ್ತೇನೆ.

**-ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

# ಗಣೇಶನ ಹಬ್ಬ ಮಕ್ಕಳಿಗೆ ಸಂಭ್ರಮ, ಸಡಗರದ ಹಬ್ಬ



ಇನ್ನು ಕೆಲವೇ ದಿನಗಳಲ್ಲಿ ಗಣೇಶ ಉತ್ಸವ ಆರಂಭವಾಗಲಿದೆ. ಗಣೇಶನ ಹಬ್ಬ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ ಸಡಗರ ಉತ್ಸಾಹ. ಏಕೆಂದರೆ ಆನೆ ಎಲ್ಲರ ಅಚ್ಚುಮೆಚ್ಚಿನ ಪ್ರಾಣಿ, ಗಣೇಶನ ಮುಖ ಆನೆಯ ಮುಖವನ್ನು ಹೊಂದಿರುವುದರಿಂದ ಗಣೇಶನ ಹಬ್ಬ ಎಂದರೆ ಮಕ್ಕಳಲ್ಲಿ ಎಲ್ಲಿಲ್ಲದ ಉತ್ಸಾಹ.

ಗಣೇಶ ಉತ್ಸವಕ್ಕೆ ಪೌರಾಣಿಕ ಹಿನ್ನೆಲೆ ಇದೆ. ಮತ್ತು ಸಾರ್ವಜನಿಕವಾಗಿ ಆಚರಿಸಲು ಪ್ರಮುಖ ಕಾರಣ ಒಂದಿದೆ.

ಪೌರಾಣಿಕ ಹಿನ್ನೆಲೆ ಎಲ್ಲರಿಗೂ ತಿಳಿದಿರುವಂಥ ವಿಚಾರವೇ ಆಗಿದೆ. ಸಾರ್ವಜನಿಕವಾಗಿ ಸಾಮೂಹಿಕವಾಗಿ ಆಚರಿಸಲು ; ಸ್ವಾತಂತ್ರ್ಯ ಸಂಗ್ರಾಮದ ಸಮಯ ಒಂದು ಕಾರಣವಾಗಿತ್ತು.

ಏಕೆಂದರೆ ಸ್ವಾತಂತ್ರ್ಯ ಹೋರಾಟಕ್ಕಾಗಿ, ಜನರನ್ನು ಜಾಗೃತಗೊಳಿಸಲು ಎಲ್ಲರೂ ಒಂದು ಕಡೆ ಸೇರಬೇಕಾಗಿತ್ತು. ಬ್ರಿಟಿಷರು ನಮ್ಮ ಮೇಲೆ, ಕೆಲವು ನಿಯಮಗಳನ್ನು ಏರಿದ್ದರು. ನಾಲ್ಕೈದು ಜನ ಕೂಡಿ ಓಡಾಡುವಂತಿರಲಿಲ್ಲ, ಯಾವುದೇ ಸಂಘ ಸಮಿತಿಗಳನ್ನು ಕಟ್ಟುವಂತಿರಲಿಲ್ಲ, ಸಂಘಟನೆಯನ್ನು ಕಟ್ಟಿದರೆ, ಬ್ರಿಟಿಷರ ವಿರುದ್ಧ ಕಾರ್ಯ ಚಟುವಟಿಕೆಗಳನ್ನು ಮಾಡುವಂತಿರಲಿಲ್ಲ ಎನ್ನುವ ನಿಯಮಗಳನ್ನು ಮಾಡಿದ್ದರು. ಹಾಗಾಗಿ ಜನರಿಗೆ ಸ್ವಾತಂತ್ರ್ಯ ಹೋರಾಟದ ಯಾವುದೇ ಮಾಹಿತಿಯನ್ನು ಹೋರಾಟಗಾರ ನಾಯಕರು ತಿಳಿಸಲು ಆಗುತ್ತಿರಲಿಲ್ಲ.

ಧಾರ್ಮಿಕ ಕ್ರಿಯಾ ಚಟುವಟಿಕೆಗಳಿಂದ ಏನಾದರೂ ಮಾಡಿ ಜನರ ಗುಂಪು ಕಟ್ಟಬೇಕೆಂದು ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರು ; ಸಾರ್ವಜನಿಕ ಗಣೇಶ ಹಬ್ಬವನ್ನು ಮಾಡುವ ಮೂಲಕ ಜನರನ್ನು ಸೇರಿಸಿ, ಸ್ವಾತಂತ್ರ್ಯ ಹೋರಾಟದ ಮಾಹಿತಿಗಳನ್ನು ತಿಳಿಸಿ ಹೋರಾಟದಲ್ಲಿ ಭಾಗಿಯಾಗಲು ಪ್ರೇರೇಪಿಸುತ್ತಿದ್ದರು. ಹಾಗಾಗಿ ಅಂದಿನಿಂದ ಇಂದಿನವರೆಗೆ ಸಾರ್ವಜನಿಕವಾಗಿ ಸಾಮೂಹಿಕವಾಗಿ ಗಣೇಶ ಹಬ್ಬವನ್ನು ಆಚರಿಸುವ ಸಂಪ್ರದಾಯವಿದೆ. ಗಣೇಶೋತ್ಸವ ಭಾರತೀಯರ ಧಾರ್ಮಿಕ ಸಂಸ್ಕೃತಿಯ ಒಂದು ಭಾಗವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ.

ಹಬ್ಬದ ಆಚರಣೆಯಿಂದ ಸಮಾಜದಲ್ಲಿ ಹಿಂದೆ ಇದ್ದ ಕೆಲವು ಅಸಮಾನತೆಯ ನಡೆಗಳು ದೂರವಾಗಿವೆ. ಹಿಂದೆ ಅನ್ನದಾನವನ್ನು ಮಾಡಲು ಭೇದ ಭಾವಗಳು ಇರುತ್ತಿದ್ದವು, ಅನ್ನದಾನಕ್ಕೂ ಶ್ರೇಣೀಕೃತ ವ್ಯವಸ್ಥೆ ಇತ್ತು.

ಆದರೆ ಗಣೇಶೋತ್ಸವದಲ್ಲಿ ದಾಸೋಹ ಕಾರ್ಯಗಳನ್ನು ಸಂಘಟಕರು ಮಾಡಿ, ಎಲ್ಲರೂ ಯಾವುದೇ ಭೇದವಿಲ್ಲದೆ ಭಾಗಿಯಾಗಿ ಪ್ರಸಾದ ಸ್ವೀಕರಿಸುವುದು ಸಮಾನತೆಯ ಸಂಸ್ಕೃತಿಗೆ ಸಾಕ್ಷಿಯಾಗಿದೆ. ಹೀಗೆ ಅನೇಕ ಬದಲಾವಣೆಗಳು ಆಗುತ್ತಿರಬೇಕು, ಇಂತಹ ಕಾರ್ಯಗಳನ್ನು ಎಲ್ಲರೂ ಒಪ್ಪಲೇಬೇಕು.

ಉತ್ಸವ ಅದ್ದೂರಿಯಾಗಿ ಜನಸ್ತೋಮದಿಂದ ನಡೆಯುತ್ತಿವೆ. ಆದರೆ ಕೆಲ ಯುವಕರ ವಿಚಿತ್ರ ವಿಕೃತ ವರ್ತನೆಯಿಂದ ಭಕ್ತಿ ಭಾವದ ಮಹತ್ವ, ಹಬ್ಬದ ಮಹತ್ವ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಅಂತ ಹೇಳಬಹುದು.

ಉತ್ಸವದಂದು ಮದ್ಯಪಾನ ಮಾಡಿ, ಅದರ ಉನ್ಮಾದದಲ್ಲಿ ಡಿಜೆ ಸೌಂಡಿಗೆ ಕುಣಿಯುವುದರಲ್ಲಿ ಭಕ್ತಿಯ ಭಾವ ಮರೆಯಾಗಿ ವಿಕೃತಿಯು ಆಚರಣೆ ಹೆಚ್ಚಾಗುತ್ತಿದೆ.

ಉತ್ಸವದಂದು ಮದ್ಯಪಾನ ಮಾರಾಟ ನಿಷೇಧವಿದ್ದರೂ, ಕೆಲವರು ಮೊದಲೇ ಮದ್ಯದ ವ್ಯವಸ್ಥೆ ಮಾಡಿಟ್ಟುಕೊಂಡು, ಉತ್ಸವದಂದು ಕುಡಿದು, ಕುಣಿದು, ಕುಪ್ಪಳಿಸುವುದು ನಮ್ಮ ಸಂಸ್ಕೃತಿಯೋ ಅಥವಾ ವಿಕೃತಿಯೋ ಎಂದು ಎಲ್ಲರೂ ಆಲೋಚಿಸಬೇಕಿದೆ. ಇದನ್ನು ಗುರು-ಹಿರಿಯರು ಯುವಕರಿಗೆ ತಿಳಿಸಿ ಹೇಳಿ ಉತ್ತಮ ಮಾರ್ಗದರ್ಶನ ಮಾಡಬೇಕಿದೆ.

ನಮ್ಮ ಭಾರತೀಯ ಸಂಸ್ಕೃತಿ ವಿಶ್ವದಲ್ಲೇ ಮಹತ್ವದ ಸ್ಥಾನ ಪಡೆದಿದೆ. ಇದನ್ನು ನಾವು ವಿಕೃತ ಮಾಡುವುದರೊಂದಿಗೆ ನಶಿಸುವಂತೆ ಮಾಡಿದರೆ, ನಾವೇ ಸಂಸ್ಕೃತಿಯ ಅಧಃಪತನ ಮಾಡಿದಂತಾಗುತ್ತದೆ ಅಲ್ಲವೇ.

ನಮ್ಮೊಳಗಿನ ಅರಿವನ್ನು ಜಾಗೃತಗೊಳಿಸಿ ಕೊಳ್ಳದೆ, ವಿಕೃತ ಆಚರಣೆಗಳನ್ನು ಸಂಪ್ರದಾಯಗಳನ್ನು ಮಾಡಿದರೆ, ಮುಂದಿನ ನಮ್ಮ ಪೀಳಿಗೆಯೂ ಸಹ ಅದನ್ನೇ ಅನುಕರಿಸಿ ಮೂಲ ಸಂಸ್ಕೃತಿ ಮಾಯವಾಗುತ್ತದೆ. ಹೀಗೆ ಮಾಡುವುದರಿಂದ ಭಾರತ ಇನ್ನೆಲ್ಲಿ ವಿಶ್ವಗುರು ಆಗುತ್ತದೆ.

ಹನ್ನೆರಡನೇಯ ಶತಮಾನದಲ್ಲಿ ಅರಿವನ್ನು ಜಾಗೃತಗೊಳಿಸಿದ ಬಸವಣ್ಣನವರು ವಿಶ್ವಗುರು ಆದರು. ಹಾಗೆ ಭಾರತೀಯರಾದ ನಾವೆಲ್ಲರೂ ಆ ಅರಿವಿನ ಪ್ರಖರತೆಯನ್ನು ಮೂಡಿಸಿಕೊಂಡರೆ ಮಾತ್ರ ಭಾರತ ವಿಶ್ವಗುರು ಆಗಲು ಸಾಧ್ಯವಾಗುತ್ತದೆ.

ಹಾಗಾಗಿ ಗಣೇಶೋತ್ಸವದಲ್ಲಿ ಡಿಜೆ ಸೌಂಡು ಕುಣಿತ ಇವೆಲ್ಲಕ್ಕೂ ತಿಲಾಂಜಲಿ ಇಟ್ಟು, ನಮ್ಮ ದೇಶದಲ್ಲಿ ನಾಡಿನಲ್ಲಿ ಅನೇಕ ಕಲೆಗಳಿವೆ ಕಲಾವಿದರಿದ್ದಾರೆ, ಅವರನ್ನು ಕರೆದು ಉತ್ಸವದ ಕಾರ್ಯಕ್ರಮಗಳಲ್ಲಿ ಅವಕಾಶ ಮಾಡಿಕೊಟ್ಟರೆ, ಕಲಾವಿದರು ಬೆಳೆಯುತ್ತಾರೆ, ಸಂಸ್ಕೃತಿಯ ಬೇರು ಆಳವಾಗಿ ಹೋಗಿ, ಭಾರತದ ಸಂಸ್ಕೃತಿಯ ಮಹತ್ವ ಏನೆಂದು ಎಲ್ಲಾ ಕಡೆ ಪಸರಿಸುತ್ತದೆ.

**- ಶಿವಪ್ರಸಾದ ಕರ್ಜಗಿ,** ದಾವಣಗೆರೆ.

# ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ

ಗುರು ಎಂದರೆ ಭಾರತೀಯ ಧರ್ಮಗಳಲ್ಲಿ ಶಿಕ್ಷಕ ಅಥವಾ ಮಾಸ್ಟರ್ ಎಂದು. ಹಾಗೆಯೇ ಹಿಂದೂ ಧರ್ಮದಲ್ಲಿ ಗುರು-ಶಿಷ್ಯ ಪರಂಪರೆಯಲ್ಲಿ ಶಿಕ್ಷಕನಿಂದ ವಿದ್ಯಾರ್ಥಿಗೆ ಹರಡುವ ಮೌಖಿಕ ಸಂಪ್ರದಾಯ ಅಥವಾ ಧಾರ್ಮಿಕ ಸಿದ್ಧಾಂತ ಅಥವಾ ಅನುಭವದ ಜಾಣ್ಮೆ ಹೊಂದಿದವರು ಎಂದರ್ಥ.

ಪ್ರಾಮಾಣಿಕ ವಿಚಾರಣೆ, ವಿನಮ್ರ ಗೌರವವನ್ನು ಸ್ವತಃ ಅರಿತು ಅಲೌಕಿಕ ಜ್ಞಾನವನ್ನು ಪಡೆದು, ಸತ್ಯದ ಅರಿವಿನಲ್ಲಿ ಸೇವೆ ಮಾಡುವ ಜ್ಞಾನಿಯನ್ನು ಹಿಂದೂ ಸಂಪ್ರದಾಯದಲ್ಲಿ ಗುರು ಅಥವಾ ಶಿಕ್ಷಕ ಎಂದು ಕರೆಯಲಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಅತೀಂದ್ರಿಯ ಜ್ಞಾನವುಳ್ಳ ವ್ಯಕ್ತಿಯಿಂದ ಜ್ಞಾನವನ್ನು, ಜಾಗೃತಿ ದೀಕ್ಷೆಯನ್ನು ಶಿಷ್ಯನಿಗೆ ನೀಡುವವನು ಗುರು, ಗುರು ಎಂಬ ವಿಷಯ ದೈವೀಕತೆಯ ಶಿಕ್ಷಕ ಎಂಬ ಆಲೋಚನೆ ಮೊದಲಿನ ಬ್ರಾಹ್ಮಣ ಸಂಘಟನೆಗಳಿಂದ ಅಭಿವ್ಯಕ್ತಗೊಂಡಿದೆ. ಮಹಾಭಾರತ ಯುದ್ದದಲ್ಲಿ ಅರ್ಜುನನಿಗೆ ಗುರುವಾಗಿ ಕೃಷ್ಣ ಮಾರ್ಗದರ್ಶನ ನೀಡಿದ್ದನು.

ಕಲಿಕೆಯಲ್ಲಿ ಆಸಕ್ತಿ ಇರುವ ಎಲ್ಲರಿಗೂ ಗುರುವೊಬ್ಬ ಬೇಕೇ ಬೇಕು. ಜಗತ್ತಿನಲ್ಲಿ ತಾಯಿ ಹೊರತಾಗಿ ಎಲ್ಲಾ ಸಮಸ್ಯೆಗಳಿಗೂ ದಾರಿದೀಪವಾಗಿ ನಿಲ್ಲಬಲ್ಲ ಸೃಷ್ಟಿ ಎಂದರೆ ಶಿಕ್ಷಕ ಮಾತ್ರ. ವಿದ್ಯೆ, ಜ್ಞಾನ, ಮಾಹಿತಿ ಪಡೆಯಲು ಮತ್ತು ಸರಿ ಯಾವುದು ? ತಪ್ಪು ಯಾವುದು ? ತಿಳಿಹೇಳಲು ಎಲ್ಲ ರಂಗಕ್ಕೂ ಗುರುವಿನ ಅಗತ್ಯ ಇದೆ.

ಸರಳತೆ, ತಾಳ್ಮೆ, ಸಮಗ್ರತೆಯ ಪ್ರತಿರೂಪವಾಗಿ ಶಿಕ್ಷಕರನ್ನು ಹಿಂದೆ ಕಾಣುತ್ತಿದ್ದೆವು, ಶಿಕ್ಷಕರೇ ನಿಜವಾದ ಅನುಕರಣೆಯ ವ್ಯಕ್ತಿಗಳು. ನಮ್ಮ ಜೀವನದಲ್ಲಿ ಧನಾತ್ಮಕ ಚಿಂತನೆಯನ್ನು ಬೆಳೆಸಿ ಸರಿ ಮಾರ್ಗವನ್ನು ತೋರುವವರು. ಇಂತಹ ಶಿಕ್ಷಕರಿಗೆ ಜನ್ಮ ಕೊಟ್ಟ ತಾಯಿ ತಂದೆಗಿಂತ ಹೆಚ್ಚಿನ ಗೌರವ ಸ್ಥಾನ ಲಭಿಸಿದೆ.

'ಮಾತೃದೇವೋಭವ', 'ಪಿತೃದೇವೋಭವ', 'ಆಚಾರ್ಯದೇವೋಭವ' ಎಂಬ ಉಕ್ತಿ ಮತ್ತು ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ ಸಾಕ್ಷಾತ್ ಪರಬ್ರಹ್ಮತಸ್ಮೈ ಶ್ರೀ ಗುರುವೇ ನಮಃ ಎಂದು ಆರಾಧಿಸುತ್ತಾ ಗುರುವನ್ನು ಪ್ರಾಚೀನ ಭಾರತದಲ್ಲಿ ದೈವಾಂಶ ಸಂಭೂತರೆಂದು ಗೌರವಿಸುತ್ತಿದ್ದರು. ಈಗ ಶಿಕ್ಷಕರ ದಿನಾಚರಣೆ ಎಂದು ಆಚರಿಸಲಾಗುತ್ತಿದೆ.

ವಿಶ್ವ ಸಂಸ್ಥೆಯ ಯುನೆಸ್ಕೊ ಕರೆಯ ಮೇರೆಗೆ ಶಿಕ್ಷಕರನ್ನು ಗೌರವಿಸಲು 1996ರಿಂದ ಅಕ್ಟೋಬರ್ 5ರಂದು ವಿಶ್ವ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಹಾಗೆಯೇ ವಿಶ್ವದ ವಿವಿಧ ದೇಶಗಳಲ್ಲಿ ಶಿಕ್ಷಕರ ದಿನಾಚರಣೆಯನ್ನು ಬೇರೆ ಬೇರೆ ದಿನಗಳಲ್ಲಿ ಆಚರಿಸಲಾಗುತ್ತಿದೆ.

ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು, ಜನ್ಮ ದಿನವನ್ನು ಆಚರಿಸಲು ತಮ್ಮ ವಿದ್ಯಾರ್ಥಿಗಳು ವಿನಂತಿಸಿದಾಗ, ವಿನಮ್ರವಾಗಿ ತಿರಸ್ಕರಿಸಿ, ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಕಾರಣರಾದ ಶಿಕ್ಷಕರ ಹೆಸರಿನಲ್ಲಿ ಆಚರಿಸಲು ಹೇಳಿದರು. ಅವರ ಸಲಹೆಯಂತೆ ದೇಶಕ್ಕೆ ಕೊಟ್ಟ ಕೊಡುಗೆಗಾಗಿ, ಗೌರವ ಸಂಕೇತವಾಗಿ ಹಾಗು ನಿಸ್ವಾರ್ಥ ಸೇವೆಯ ಕೃತಜ್ಞತೆಗಾಗಿ, ಶಿಕ್ಷಕರು, ಶೈಕ್ಷಣಿಕ ತತ್ವಜ್ಞಾನಿಗಳು ಹಾಗು ಭಾರತದ ಎರಡನೆಯ ರಾಷ್ಟ್ರಪತಿಗಳಾದ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಜನ್ಮ ದಿನವಾದ ಸೆಪ್ಟಂಬರ್ 5 ರಂದು ಶಿಕ್ಷಕರ ದಿನಾಚರಣೆ ಎಂದು 1962ರಲ್ಲಿ ಭಾರತ ಸರ್ಕಾರ ಘೋಷಿಸಿತು. ಅಂದಿನಿಂದ ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ.

'ಶಿಕ್ಷಕರ ದಿನಾಚರಣೆ' ಯಂದು ಕೃತಜ್ಞತೆಯಿಂದ ಸ್ಮರಿಸಿ ಗೌರವ ಸಲ್ಲಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಶಿಕ್ಷಕರಿಗೆ ಗೌರವಪೂರ್ವಕ ನಮನಗಳೊಂದಿಗೆ ಶಿಕ್ಷಕರ ದಿನಾಚರಣೆಯ ಗೌರವಪೂರ್ವಕ ಶುಭಾಶಯಗಳು.

**-ಎಸ್.ಸಿದ್ದೇಶ್ ಕುರ್ಕಿ**
ಬೋಧಕರು, ಬಾಪೂಜಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.

# ಹರಿಯಾಣ : ಟಿಕೆಟ್ ಸಿಗದ ಬಿಜೆಪಿ ಸಚಿವ, ಶಾಸಕರ ಬಂಡಾಯ

ಚಂಡಿಘಡ, ಸೆ. 5 - ಬಿಜೆಪಿ ಟಿಕೆಟ್ ನಿರಾಕರಿಸಿರುವ ಕಾರಣಕ್ಕಾಗಿ ಹರಿಯಾಣದ ಸಚಿವ ರಣಜಿತ್ ಸಿಂಗ್ ಚೌತಾಲಾ ಹಾಗೂ ಶಾಸಕ ಲಕ್ಷ್ಮಣ ದಾಸ್ ಅವರು ಬಂಡಾಯ ಮೊಳಗಿಸಿದ್ದಾರೆ.

ಮಾಜಿ ಉಪ ಪ್ರಧಾನ ಮಂತ್ರಿ ದೇವಿ ಲಾಲ್ ಅವರ ಪುತ್ರರಾಗಿರುವ ರಣಜಿತ್ ಚೌತಾಲ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ.

ಟಿಕೆಟ್ ನಿರಾಕರಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ತೊರೆಯುವುದಾಗಿ ಶಾಸಕ ಲಕ್ಷ್ಮಣ ದಾಸ್ ಹೇಳಿದ್ದಾರೆ. ಟಿಕೆಟ್ ವಂಚಿತರಾಗಿರುವ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಕರಣ್ ದೇವ್ ಕಾಂಬೋಜ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅಕ್ಟೋಬರ್ 5ರಂದು ಹರಿಯಾಣ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಬಿಜೆಪಿ ನಿನ್ನೆ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು 67 ಅಭ್ಯರ್ಥಿಗಳನ್ನು ಆಯ್ಕೆ ಮಾಡಿತ್ತು.


**ಬೇಕಾಗಿದ್ದಾರೆ**
ಹೊಸ ಹೋಟೆಲ್‌ಗೆ ಎಲ್ಲಾ ತರಹದ ತಿಂಡಿ ಮಾಡುವ ಭಟ್ಟರು ಬೇಕಾಗಿದ್ದಾರೆ.
1) ದೋಸೆ ಭಟ್ಟರು
2) ವಡೆ - ಮೆಣಸಿನಕಾಯಿ ಭಟ್ಟರು
ಕಿರಣ್ ಬೂಸ್ನೂರ್
98440-63409
ಖಾನಾವಳಿಗೆ ಅಡುಗೆ ಮಾಡುವ ಭಟ್ಟರೂ ಸಹ ಬೇಕಾಗಿದ್ದಾರೆ.

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ, ಆಂಜನೇಯ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಲೇಔಟ್, ವಿವೇಕಾನಂದ ಬಡಾವಣೆ, ವಿನಾಯಕ ಬಡಾವಣೆ, ಶಿವಕುಮಾರ ಬಡಾವಣೆಗಳಲ್ಲಿ 30x40, 30x50, 40x60, ಸೈಟುಗಳು ದೊರೆಯುತ್ತವೆ.
95385 65909

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಬಾಡಿಗೆಗಿದೆ**
#174/A, 3ನೇ ಮೇನ್, 6ನೇ ಕ್ರಾಸ್, ಸಿ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
2 ಬೆಡ್ ರೂಂ, ಪಾಲಿಕೆ ಮತ್ತು ಬೋರ್ ನೀರಿನ ಸೌಲಭ್ಯವಿದೆ.
98442 15950

**ಮಳಿಗೆಗಳು ಬಾಡಿಗೆಗಿದೆ**
900 sqft. ಶಾಮನೂರು ರೋಡ್ ಎಸ್.ಎಸ್. ಮಾಲ್ ಹತ್ತಿರ ಸಾಯಿ ರಾಂ ಕಾಂಪ್ಲೆಕ್ಸ್, ದಾವಣಗೆರೆ.
90082 20077
90084 88097

**ಜಮೀನು ಮಾರಾಟಕ್ಕೆ ಬೇಕಾಗಿದೆ**
ದಾವಣಗೆರೆ ಸಿಟಿಯಿಂದ 10ಕೀ. ಮೀ ಒಳಗಡೆಯಲ್ಲಿ ಇರಬೇಕು.
ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
99005 21848

**ಜಮೀನು ಮಾರಾಟಕ್ಕಿದೆ**
ಹೌಸಿಂಗ್ ಬೋರ್ಡ್‌ನಿಂದ 2½ ಕಿ.ಮೀ. ದಾವಣಗೆರೆಯಿಂದ 10 ಕಿ.ಮೀ. ದೂರದಲ್ಲಿರುವ ಮೂರು ಮುಕ್ಕಾಲು ಎಕರೆ, ರಸ್ತೆಯ ಪಕ್ಕದಲ್ಲೇ ಇರುವ ಜಮೀನು ಮಾರಾಟಕ್ಕಿದೆ.
9632030161, 95380 24422

**ಜಮೀನು ಮಾರಾಟಕ್ಕಿದೆ / ಹಸು ಸಾಕುವ ಮನೆ ಲೀಸ್‌ಗೆ**
ಹಳೆಬಿಸಲೇರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ.
ಬೋರ್‌ವೆಲ್ ಇದೆ.
96065 57300

**ಹುಡುಗರು ಬೇಕಾಗಿದ್ದಾರೆ**
ಕೌಂಟರ್ ಕೆಲಸಕ್ಕೆ
ಊಟ + ವಸತಿ ವ್ಯವಸ್ಥೆ ಇದೆ.
ಶ್ರೀ ಗುರು ಕೊಟ್ಟೂರೇಶ್ವರ ಬೇಕರಿ
ಹದಡಿ ರೋಡ್, ದಾವಣಗೆರೆ.
80503 38335

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು
ರೂ. 25/- ಸ್ಥಳ : ದೊಡ್ಡಬಾತಿ
88920 08800

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**ಮನೆ ಬಾಡಿಗೆಗೆ ಇದೆ**
2BHK, 1ಸ್ಟ್ ಫ್ಲೋರ್, #159, 5ನೇ ಕ್ರಾಸ್, 1ನೇ ಮೇನ್, B ಬ್ಲಾಕ್, ದೇವರಾಜ್ ಅರಸು ಲೇಔಟ್, ದಾವಣಗೆರೆ.
99005 21848

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ನೇತ್ರ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸೈಟು ಅಥವಾ ಮನೆ ಮಾರಾಟಕ್ಕೆ ಬೇಕಾಗಿದೆ**
ದೇವರಾಜ್ ಅರಸು ಲೇಔಟ್‌ನಲ್ಲಿ ಮಾತ್ರ.
(ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)
99005 21848

**WANTED**
Ladies / Gents Helpers SSLC Passed or Failed.
Timings10.30 to 8.30 PM.
Contact : Cindrella Chocolate Shop
Vidyanagar 1st Bus Stop, Davanagere.
63603 34198

**ಪಾರ್ಟ್ ಟೈಂ/ಫುಲ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ**
SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರಿಗೆ ತರಬೇತಿ ಜೊತೆಗೆ ವೇತನ.
ಜ್ಯೋತಿ ಮೆಟಲ್ಸ್
ಗ್ಯಾಸ್/ಎಲೆಕ್ಟ್ರಿಕ್ ಗೀಸರ್,ವಾಟರ್ ಪ್ಯೂರಿಫೈಯರ್, ಸೋಲಾರ್ ಸೇಲ್ಸ್ & ಸರ್ವೀಸ್, ದಾವಣಗೆರೆ.
98800 34643, 94800 51462

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes + Study Materials
97398 65711, 94822 44114

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. (Only for Veg)
Vidyanagar last city bus stop, Davangere
8951938228, 8050222181

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**KAIDB**
Furniture Factory for Rent, Davanagere. 4000 Sqft.
98459 77475

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**SRILANKA TOUR**
Rs 54,900 pp
Dubai 5 days OCT 12th
Rs. 89,900
DVG WORLD TOURS
99006 66122

**CHANGE OF NAME**
REVANASIDDAPPA (old name) S/o DODDAPPA SIDDAPPA Resident of # 11/5, Revana siddappa Kana Budal Road, Davangere, Davangere Dist. Karnataka Has Changed my name as REVANASIDDAPPA HOTTAPPALA Vide affidavit dated 05.09.2024 sworn before Notary. I.P. Brahmakumar, Davangere. Henceforth all my transactions and dealings will be in my new name REVANASIDDAPPA HOTTAPPALA
Sd/- REVANASIDDAPPA HOTTAPPALA



# ಸತತ ಪ್ರಯತ್ನ, ಶ್ರದ್ಧೆ ಇದ್ದರೆ ಸಾಧನೆ ಸಾಧ್ಯ

**ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಶಿಕ್ಷಕರ ದಿನಾಚರಣೆಯಲ್ಲಿ ಐರನ್‌ಮ್ಯಾನ್ ಪ್ರಶಸ್ತಿ ಪುರಸ್ಕೃತ ನಟರಾಜ್ ಪರಾವರ್**

ದಾವಣಗೆರೆ, ಸೆ. 5 - ಯಾವುದೇ ಸಾಧನೆಗೆ ವಯಸ್ಸು ಎಂಬುದು ಅಡ್ಡಿ ಬರುವುದಿಲ್ಲ. ಗುರಿಯನ್ನು ನಿಗದಿಪಡಿಸುವುದು ಉತ್ತಮ ಎಂದು ತಮ್ಮ 50ನೇ ವಯಸ್ಸಿನಲ್ಲಿ ಟ್ರಯಥ್ಲಾನ್ ಕ್ರೀಡೆಯಲ್ಲಿ ಐರನ್‌ಮ್ಯಾನ್ ಪ್ರಶಸ್ತಿಯನ್ನು ಪಡೆದ ನಗರದವರೇ ಆದ ನಟರಾಜ್ ಪರಾವರ್ ಅವರು ಪ್ರತಿಪಾದಿಸಿದರು.

ಸ್ಥಳೀಯ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯಲ್ಲಿ ಇಂದು ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಕ್ರೀಡಾ ಮನೋಭಾವನೆ ಬಿತ್ತಿದ ಪ್ರೌಢಶಾಲೆಯ ಶಿಕ್ಷಕರಾದ ಹೇಮಾನಾಯ್ಕ ಅವರನ್ನು ನೆನೆದರು. ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ಜೀವನದ ಎಲ್ಲಾ ಶಿಕ್ಷಕರನ್ನು ನೆನೆದರು. ಅಮೇರಿಕಾದಲ್ಲಿ ನೆಲೆಸಿದ್ದರೂ ಸುಸ್ಪಷ್ಟವಾಗಿ ಕನ್ನಡದಲ್ಲಿ ಅರಳು ಹುರಿದಂತೆ ಅವರು ಮಾತನಾಡಿದರು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಸಂವಾದವನ್ನು ನಡೆಸಿದರು.

ಮತ್ತೋರ್ವ ಅತಿಥಿಯಾಗಿದ್ದ ಹಿರಿಯ ರಂಗಕರ್ಮಿ - ಕಲಾವಿದ ಆರ್.ಟಿ. ಅರುಣಕುಮಾರ್ ತಮ್ಮ ಮಿಮಿಕ್ರಿ ನಗೆಯ ಹರಟೆ, ತಮ್ಮದೇ ಜೀವನದ ಹಲವು ಘಟನೆಗಳನ್ನು ಹೇಳುತ್ತಾ, ತಾವು ಕ್ಯಾನ್ಸರ್‌ನಿಂದ ಗೆದ್ದು ಬಂದ ಬಗೆ ಹಾಗೂ ಸಾಧನೆಗಾಗಿ ಗುರುಗಳು ಹೇಗೆ ಸಹಾಯಕರಾಗುತ್ತಾರೆಂದು ಮಾರ್ಮಿಕವಾಗಿ ಬೋಧಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುರುಘೇಂದ್ರ ಚಿಗಟೇರಿ ಅವರು ಶಿಕ್ಷಕ ವರ್ಗದವರಿಗೆ ಶುಭ ಕೋರಿದರು. ಸಂಸ್ಥೆಯ ಗೌರವಾಧ್ಯಕ್ಷ ವೀರಣ್ಣ ವಿ. ಚಿಗಟೇರಿ, ಉಪಾಧ್ಯಕ್ಷ ಬಸವರಾಜಪ್ಪ ಬೆಳಗಾವಿ, ಕಾರ್ಯದರ್ಶಿ ಮನೋಹರ ಚಿಗಟೇರಿ ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.

ಬಿ.ಕೆ. ಹನುಮಂತಪ್ಪ ಸ್ವಾಗತಿಸಿದರು. ಹೆಚ್.ಬಿ. ಜ್ಯೋತಿ ವಂದಿಸಿದರು. ಬಸವರಾಜ್ ನಿರೂಪಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕ ಸಿಬ್ಬಂದಿವರ್ಗದವರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

# ಮಲಬಾರ್ ಗೋಲ್ಡ್‌ನಲ್ಲಿ ಶಿಕ್ಷಕರಿಗೆ ಸನ್ಮಾನ




ದಾವಣಗೆರೆ, ಸೆ. 5 - ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ನಾಲ್ವರು ಉತ್ತಮ ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಶಿಲ್ಪ ಸರ್ಕಾರಿ ಹೈಸ್ಕೂಲ್ ಗುಳ್ಳದಳ್ಳಿ, ಹರಿಹರದ ಇಂದಿರಮ್ಮ ಜಿ.ಸಿ. ಜಿ.ಯು.ಹೆಚ್.ಪಿ.ಎಸ್. ನಿಟ್ಟುವಳ್ಳಿ, ದಾವಣಗೆರೆ, ಶಾಂತಲಾ ದೇವಿ ಕೆ.ಪಿ.ಎಸ್. ಬಿಳಿಚೋಡು ಜಗಳೂರು ಕುಸುಮ ಜಿ.ಹೆಚ್.ಪಿ.ಎಸ್, ಹಳೇಪೇಟೆ ದಾವಣಗೆರೆ ಇವರಿಗೆ ಗೌರವ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥ ಬೇಸಿಲ್ ರಾಜನ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಶಿಕ್ಷಕರ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಣೆ ಮಾಡಲಾಯಿತು.

# ಮಾತೃದೇವೋ ಸಮಾಜ ಕಲ್ಯಾಣ ಚಾರಿಟಬಲ್ ಟ್ರಸ್ಟ್‌ನಿಂದ ಶಿಕ್ಷಕರಿಗೆ ಸನ್ಮಾನ



ದಾವಣಗೆರೆ, ಸೆ. 5- ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ ಎಸ್.ಓ.ಜಿ ಕಾಲೋನಿಯ ಜಿ.ವಿ.ಎಸ್. ಕಾನ್ವೆಂಟ್‌ಗೆ ಭೇಟಿಕೊಟ್ಟು ಶಿಕ್ಷಕರಿಗೆ ಶಿಕ್ಷಕರ ದಿನದ ಶುಭಾಶಯಗಳನ್ನು ತಿಳಿಸಿ ಸಂಸ್ಥಾಪಕ ಅಧ್ಯಕ್ಷ ಪೋತುಲ ಶ್ರೀನಿವಾಸ ನೇತೃತ್ವದಲ್ಲಿ ಕೆ.ಎನ್. ಪ್ರಜ್ವಲ್ ಶಿಕ್ಷಕ ವೃತ್ತಿಯ ಮಹತ್ವದ ಬಗ್ಗೆ ಮಾತನಾಡಿದರು.

ಶಿಕ್ಷಕರುಗಳಾದ ಗೀತಾ, ಹೇಮಾ, ಪವಿತ್ರಾ ಮತ್ತು ಗುರುರಾಜ್ ಅವರುಗಳಿಗೆ ಸನ್ಮಾನ ಮಾಡುವ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಸದಸ್ಯರಾದ ಭಾರದ್ವಾಜ್, ಶ್ರೀಮತಿ ವನಿತಾ, ಆಶಾ, ಲಕ್ಷ್ಮಿ ಚಂದ್ರಕಲಾ, ಮಂಜುನಾಥ್, ರಾಘವೇಂದ್ರ ಉಪಸ್ಥಿತರಿದ್ದರು.

# ಶ್ರೀ ಮಹರ್ಷಿ ವಾಲ್ಮೀಕಿ ಸ್ಮರಣಾರ್ಥ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 2 - ರಾಜ್ಯ ಸರ್ಕಾರದ ವತಿಯಿಂದ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಬರುವ ಅಕ್ಟೋಬರ್ 17 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಈ ಜಯಂತಿ ಸಂದರ್ಭದಲ್ಲಿ ಪರಿಶಿಷ್ಟ ಪಂಗಡ ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಹಾಗೂ ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಅರ್ಹ ವ್ಯಕ್ತಿಗಳಿಗೆ ಶ್ರೀ ಮಹರ್ಷಿ ವಾಲ್ಮೀಕಿ ರವರ ಸ್ಮರಣಾರ್ಥ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕೊಠಡಿ ಸಂಖ್ಯೆ 45, ಎರಡನೇ ಮಹಡಿ. ಜಿಲ್ಲಾಡಳಿತ ಭವನ, ದಾವಣಗೆರೆ. ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ, ಕಛೇರಿ ಸಮಯದಲ್ಲಿ ಸೆ. 17 ರ ಒಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಸಲು ಕಲ್ಯಾಣಾಧಿಕಾರಿ ನವೀನ್ ಸಿ.ಮಠದ್ ತಿಳಿಸಿದ್ದಾರೆ.

## ಓದುಗರ ಪತ್ರ

### ಗಣಪತಿ ಹಬ್ಬವನ್ನು ಸುಸಂಸ್ಕೃತವಾಗಿ ಆಚರಿಸೋಣ

ಮಾನ್ಯರೇ,

ಬರುವ ಗಣಪತಿ ಹಬ್ಬವನ್ನು ಸಂಸ್ಕೃತಿ, ಸಂಸ್ಕಾರದಿಂದ ಆಚರಿಸುವ ಮೂಲಕ ಧರ್ಮ ರಕ್ಷಣೆ ಮಾಡಬೇಕಿದೆ. ಗಣಪತಿ ಪ್ರತಿಷ್ಠಾಪನೆ ಮಾಡುವಾಗ ಮತ್ತು ವಿಸರ್ಜನೆ ಸಮಯದಲ್ಲಿ ಭಕ್ತಿ ಗೀತೆ, ದೇಶ ಭಕ್ತಿ ಗೀತೆ ಹಾಡುಗಳನ್ನು ಪ್ರಸಾರಗೊಳಿಸಿ ಕುಣಿಯಬೇಕು. ಇಂದಿನ ದಿನಮಾನದಲ್ಲಿ ಯುವಕರು ಸಾರಾಯಿ, ಗುಟ್ಕಾ, ಬೀಡಿ ಹಾಗೂ ಸಿಗರೇಟು ಸೇದುವ ಮೂಲಕ ಹಬ್ಬ ಆಚರಣೆ ಮಾಡಿದರೇ ಹಿಂದೂ ಧರ್ಮಕ್ಕೆ ಅವಮಾನ ಮಾಡಿದಂತಾಗುತ್ತದೆ. ಜಗತ್ತಿನಲ್ಲಿ ಹಿಂದೂಗಳಿಗಾಗಿ ಇರುವ ಏಕೈಕ ದೇಶವೇ ಭಾರತ. ಆದ್ದರಿಂದ ನಮ್ಮ ದೇಶ ಹಾಗೂ ಧರ್ಮದ ಸಂಸ್ಕೃತಿ ಕಾಪಾಡಿಕೊಳ್ಳುವ ಮೂಲಕ ಸುಸಂಸ್ಕೃತವಾಗಿ ಗಣಪತಿ ಹಬ್ಬ ಆಚರಿಸೋಣ.

**- ಜೆಂಬಿಗಿ ಮೃತ್ಯುಂಜಯ, ಕನ್ನಡ ಉಪನ್ಯಾಸಕರು, ದಾವಣಗೆರೆ**

# ಸೌಹಾರ್ದಯುತ ಸಹಬಾಳ್ವೆ ಜೀವನದ ಉಸಿರಾಗಲಿ

**ರಂಭಾಪುರಿ ಪೀಠದ ಜಗದ್ಗುರುಗಳ ಕಳಕಳಿ**


ಶಿವಮೊಗ್ಗ, ಸೆ.5- ಮಾನವನಿಗೆ ಸಂಸ್ಕಾರ ದೊರೆತರೆ ಬೆಲೆಯುಳ್ಳ ಬದುಕು ಸಾರ್ಥಕಗೊಳ್ಳುತ್ತದೆ. ಉನ್ನತ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ. ಪರಸ್ಪರ ಸಹಕಾರದಿಂದ ಸರ್ವೋನ್ನತಿ ಸಾಧ್ಯ. ಸೌಹಾರ್ದಯುತ ಸಹಬಾಳ್ವೆ ಜೀವನದ ಉಸಿರಾಗಬೇಕೆಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ಶ್ರೀ ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶ್ರೀ ಬಸವೇಶ್ವರ ಸ್ವಾಮಿ ಪಟ್ಟಣ ಪತ್ತಿನ ಸಹಕಾರ ಸಂಘದ ನೂತನ ಕಾರ್ಯಾಲಯ ಉದ್ಘಾಟನೆ ಹಾಗೂ ಸ್ವಯಂಭು ಶ್ರೀ ಸೋಮೇಶ್ವರ ಸಭಾಭವನ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಸತ್ಯಾನ್ವೇಷಣೆಯ ಹಾದಿಯಲ್ಲಿ ನಡೆದಾಗ ಜೀವನ ಮೌಲ್ಯ ಸಮೃದ್ಧಿಯಾಗುತ್ತದೆ. ಸತ್ಯ, ಶಾಂತಿ ಎಲ್ಲರ ಬಾಳಿಗೆ ಅಗತ್ಯ. ಆಹಾರ-ನೀರಿನಿಂದ ಮನುಷ್ಯ ದೈಹಿಕವಾಗಿ ಬಲಗೊಂಡರೆ, ಧರ್ಮ ಮತ್ತು ಧರ್ಮಾಚರಣೆಯಿಂದ ಜೀವನ ವಿಕಾಸಗೊಳ್ಳುತ್ತದೆ.

ಮನುಷ್ಯನಲ್ಲಿ ಕರ್ತವ್ಯ, ಶಿಸ್ತು, ಶ್ರದ್ಧೆ, ಛಲ, ಸಮರ್ಪಣಾ ಮನೋಭಾವ ಬೆಳೆಸಿಕೊಳ್ಳಬೇಕು. ದೇಹವನ್ನು ದುಡಿಮೆಗೆ, ಮನಸ್ಸನ್ನು ಭಗವಂತನಿಗೆ ಅರ್ಪಿಸಿ ಮುನ್ನಡೆದರೆ ಜೀವನ ಸುಖಮಯವಾಗುತ್ತದೆ. ಸಿದ್ಧಾಂತ ರಹಿತ ಜೀವನವು ದಿಕ್ಸೂಚಿ ಇಲ್ಲದ ನೌಕೆಯಂತೆ ನಮ್ಮ ಬದುಕಾಗಬಾರದು. ಇನ್ನೊಬ್ಬರಿಗೆ ನಮ್ಮ ಬದುಕು ಮಾದರಿಯಾಗಬೇಕಲ್ಲದೇ, ಮಾರಕವಾಗಬಾರದು ಎಂದರು.

ನೂತನ ಸಭಾ ಭವನವನ್ನು ಉದ್ಘಾಟಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ಸಹಕಾರಿ ಸಂಸ್ಥೆಗಳು ಬೆಳೆಯಲು ಜನತೆಯ ಸಹಕಾರವೂ ಅವಶ್ಯಕವಾಗಿದೆ ಎಂದರು.



ಸಂಘದ ಮಾಜಿ ಅಧ್ಯಕ್ಷ ಹೆಚ್. ವಿ.ಮಹೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ದರು. ಸಂಘದ ಅಧ್ಯಕ್ಷ ಕೆ. ಎಸ್.ತಾರಾನಾಥ್ ಅಧ್ಯಕ್ಷತೆ ವಹಿಸಿದ್ದರು.

ಎಡೆಯೂರು ರೇಣುಕ ಶಿವಾಚಾರ್ಯರು, ಮಳಲಿ ಡಾ.ನಾಗಭೂಷಣ ಶಿವಾಚಾರ್ಯರು, ಬಿಳಕಿ ರಾಚೋಟೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ಶಾಸಕ ಎಸ್.ಎನ್.ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ, ಕ.ರಾ.ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಸೂಡಾ ಅಧ್ಯಕ್ಷ ಹೆಚ್. ಎಸ್.ಸುಂದರೇಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಸ್.ಕೆ.ಮರಿಯಪ್ಪ, ನಿರ್ದೇಶಕರಾದ ಮಹಾಲಿಂಗಯ್ಯ ಶಾಸ್ತ್ರಿ, ಜಿ.ಎನ್.ಸುಧೀರ್, ಶ್ರೀ ಬಸವೇಶ್ವರ ವೀ.ಸ.ಸೇ. ಸಂಘದ ಅಧ್ಯಕ್ಷ ಎಸ್.ಎಸ್.ಜ್ಯೋತಿಪ್ರಕಾಶ್, ಅ.ಭಾ.ವೀ. ಮಹಾಸಭಾ ಜಿಲ್ಲಾಧ್ಯಕ್ಷ ಎಸ್.ಎನ್. ರುದ್ರಮುನಿ, ಎಂ.ಶ್ರೀಕಾಂತ, ಮಾಜಿ ಶಾಸಕ ಹೆಚ್.ಎಂ.ಚಂದ್ರಶೇಖರಪ್ಪ, ನಾಗಭೂಷಣ ಕಲ್ಮನೆ, ಆರ್.ತೇಜೋಮೂರ್ತಿ, ಟಿ.ವಿ. ಶ್ರೀನಿವಾಸ್ ಭಾಗವಹಿಸಿದ್ದರು.

ಹೆಚ್.ಎಸ್.ಶಂಕರ್, ಹೆಚ್.ಎನ್. ಬಸವರಾಜ್, ಹೆಚ್.ಎಂ.ತಿಪ್ಪೇಸ್ವಾಮಿ, ಕೆ.ಸಿ. ನಾಗರಾಜ್, ವಿ.ಸಿ.ಎಸ್.ಮೂರ್ತಿ, ಬಾರಂದೂರು ಪ್ರಕಾಶ, ರಾಜೇಶ್ ಸುರಗೀಹಳ್ಳಿ, ಕೆ.ರವಿಚಂದ್ರ, ಅನಿತಾ ರವಿಶಂಕರ್, ಮಾಲತೇಶ ಸಿ.ಹೆಚ್., ಜೆ. ಸೋಮಶೇಖರ್, ಶೈಲಜಾ ಪರಮೇಶ್ವರ ಹಾಗೂ ಮಲ್ಲಿಕಾರ್ಜುನ ಎಸ್.ಪಿ. ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರು ರಕ್ಷೆ ನೀಡಿ ಆಶೀರ್ವದಿಸಿದರು.

ಎಂ.ಆರ್.ಪ್ರಕಾಶ್ ಸ್ವಾಗತಿಸಿದರು. ಬಳ್ಳೆಕೆರೆ ಸಂತೋಷ ಹಾಗೂ ಶಿವಮೊಗ್ಗದ ಶಾಂತಾ ಆನಂದ ನಿರೂಪಿಸಿದರು.

# ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ಅಗತ್ಯವಿಲ್ಲ : ಗಡ್ಕರಿ

ನವದೆಹಲಿ, ಸೆ. 5 - ಗ್ರಾಹಕರು ಈಗ ತಾವಾಗಿಯೇ ಎಲೆಕ್ಟ್ರಿಕ್ ವಾಹನ ಇಲ್ಲವೇ ಸಿಎನ್‌ಜಿ ವಾಹನಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ನೀಡುವ ಅಗತ್ಯವಿಲ್ಲ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಬಿ.ಎನ್.ಇ.ಎಫ್. ಶೃಂಗಸಭೆಯಲ್ಲಿ ಮಾತನಾಡಿದ ಗಡ್ಕರಿ, ಆರಂಭಿಕ ದಿನಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಉತ್ಪಾದನಾ ವೆಚ್ಚ ಹೆಚ್ಚಾಗಿತ್ತು. ಈಗ ಬೇಡಿಕೆ ಹೆಚ್ಚಾಗಿರುವ ಕಾರಣ ಉತ್ಪಾದನಾ ವೆಚ್ಚದಲ್ಲಿ ಇಳಿಕೆಯಾಗಿದೆ. ಹೀಗಾಗಿ ಈ ವಾಹನಗಳಿಗೆ ಸಬ್ಸಿಡಿಯ ಅಗತ್ಯವಿಲ್ಲ ಎಂದಿದ್ದಾರೆ.

ಪೆಟ್ರೋಲ್ ಹಾಗೂ ಡೀಸೆಲ್ ವಾಹನಗಳಿಗೆ ಹೋಲಿಸಿದರೆ ಎಲೆಕ್ಟ್ರಿಕ್ ವಾಹನಗಳಿಗೆ ತೆರಿಗೆ ಕಡಿಮೆ. ಹೀಗಾಗಿ ಈ ವಾಹನಗಳಿಗೆ ಸರ್ಕಾರದ ಸಬ್ಸಿಡಿಯ ಅಗತ್ಯವಿಲ್ಲ ಎಂಬುದು ನನ್ನ ಭಾವನೆ. ಈ ವಾಹನಗಳಿಗೆ ಸಬ್ಸಿಡಿ ಕೇಳುವುದು ಸಮರ್ಥನೀಯವಲ್ಲ ಎಂದವರು ಹೇಳಿದ್ದಾರೆ.

ಪ್ರಸಕ್ತ ಎಲೆಕ್ಟ್ರಿಕ್ ವಾಹನಗಳಿಗೆ ಶೇಕಡ 5ರ ಜಿಎಸ್‌ಟಿ ವಿಧಿಸಲಾಗುತ್ತಿದೆ. ಉಳಿದ ವಾಹನಗಳಿಗೆ ಜಿಎಸ್‌ಟಿ ಶೇ. 28ರಷ್ಟಿದೆ.

ಪೆಟ್ರೋಲ್ ಹಾಗೂ ಡೀಸೆಲ್ ವಾಹನಗಳ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ಸಾಧ್ಯತೆ ತಳ್ಳಿ ಹಾಕಿರುವ ಗಡ್ಕರಿ, ಸಾಂಪ್ರದಾಯಿಕ ಇಂಧನದಿಂದ ಪರ್ಯಾಯ ಇಂಧನದ ವಾಹನಗಳಿಗೆ ತೆರಳುವುದು ನಿಧಾನವಾಗಿ ನಡೆಯುವ ಪ್ರಕ್ರಿಯೆಯಾಗಿದೆ ಎಂದು ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ ಬ್ಯಾಟರಿಗಳ ಬೆಲೆ ಇಳಿಕೆಯಾಗುತ್ತದೆ. ಇದು ಎಲೆಕ್ಟ್ರಿಕ್ ವಾಹನಗಳಿಗೆ ಇನ್ನಷ್ಟು ಉಪಯುಕ್ತವಾಗಲಿದೆ. ಮುಂದಿನ ಎರಡು ವರ್ಷಗಳಲ್ಲಿ ಡೀಸೆಲ್, ಪೆಟ್ರೋಲ್ ಹಾಗೂ ಎಲೆಕ್ಟ್ರಿಕ್ ವಾಹನಗಳ ಬೆಲೆ ಒಂದೇ ಆಗಿರಲಿದೆ ಎಂದು ಗಡ್ಕರಿ ಅಂದಾಜಿಸಿದ್ದಾರೆ.

# ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಪತ್ರಿಕಾ ವಿತರಕರ ದಿನಾಚರಣೆ



ದಾವಣಗೆರೆ, ಸೆ. 5- ವಿಶ್ವ ಪತ್ರಿಕೆ ವಿತರಕರ ದಿನಾಚರಣೆಯ ಅಂಗವಾಗಿ ದಾವಣಗೆರೆ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪತ್ರಿಕೆಯನ್ನು ಸರಬರಾಜು ಮಾಡುವ ಸ್ಥಳದಲ್ಲಿ ವಿಶ್ವ ದಿನಪತ್ರಿಕೆ ದಿನವನ್ನು ಸಿಹಿ ಹಂಚುವುದರ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಹೆಚ್. ಚಂದ್ರು, ಅರುಣ್ ಕುಮಾರ್, ಕುಮಾರಸ್ವಾಮಿ, ನಿಂಗಪ್ಪ, ಟಿ.ಪಿ. ನಾಗರಾಜ್, ಗಂಗಾಧರ, ಬಿ. ಮಂಜುನಾಥ, ರಘುರಾಮ, ಎ. ಪ್ರಕಾಶ್, ನರೇಂದ್ರ, ಬಸವರಾಜ್, ತಿಪ್ಪೇಸ್ವಾಮಿ, ಡಿ. ರವಿ, ಉಮೇಶ್, ಕಾಫಿಬಾರ್ ರಮೇಶ್, ಆನಂದರಾಜ್, ಎಸ್. ಮಂಜು, ನಾಗೇಂದ್ರ, ನಾರಾಯಣ, ಪ್ರದೀಪ, ಸಂತೋಷ್, ಸುಧಾಕರ್ ಸ್ವಾಮಿ, ಕೆ.ಪ್ರಕಾಶ್, ಸತೀಶ್, ಶಂಕರ್, ರವೀಂದ್ರ, ಪ್ರಕಾಶ್ ಶೆಟ್ರು, ಮುದ್ದಣ್ಣ, ಗಿರೀಶ್, ಮಂಜುನಾಥ್, ಶ್ರೀನಾಥ್, ಪರಮೇಶ್, ಇಸಾಕ್, ಚಂದ್ರು ಬೂಸ್ನೂರು, ಮಂಜುನಾಥ್ ಶೆಟ್ರು, ಶರತ್, ಶಿವರಾಜ್, ಮಂಜು, ಸಿದ್ದೇಶ್ ಮತ್ತಿತರರಿದ್ದರು.

# ಶಾಲಾ ಮಟ್ಟದಲ್ಲಿಯೇ ಪ್ರಶ್ನೆ ಪತ್ರಿಕೆಗಳ ರಚನೆಗೆ ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಸೆ. 5- ಈ ಸಾಲಿನ ಎಸ್ಸೆಸ್ಸೆಲ್ಸಿ ಮಧ್ಯವಾರ್ಷಿಕ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ರೂಪಿಸಿ, ನೀಡಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ನಿರ್ಧರಿಸಿದೆ. ಮಧ್ಯವಾರ್ಷಿಕ ಪರೀಕ್ಷೆಗಳಿಗೆ ಕೆಲವೇ ದಿನಗಳು ಬಾಕಿ ಉಳಿದಿರುವ ಸಂದರ್ಭದಲ್ಲಿ ಈ ನಿರ್ಣಯ ಕೈಗೊಂಡಿರುವುದು ಖಂಡನೀಯ. ಇಲಾಖೆಯ ಮತ್ತು ಸರ್ಕಾರದ ಈ ಹಠಾತ್ ಹಾಗೂ ಅಪ್ರಜಾತಾಂತ್ರಿಕ ನಿರ್ಧಾರ ಕೈಬಿಡಬೇಕೆಂದು ಎಐಡಿಎಸ್‌ಓ ಆಗ್ರಹಿಸಿದೆ.

ಶಿಕ್ಷಣದಲ್ಲಿ ಯಾವುದೇ ಬದಲಾವಣೆಗಳನ್ನು ತರಬೇಕಾದರೆ ಅದನ್ನು ಶೈಕ್ಷಣಿಕ ವರ್ಷದ ಆರಂಭದಲ್ಲೇ ಮಾಡಬೇಕು. ಅರ್ಧವಾರ್ಷಿಕ ಪರೀಕ್ಷೆಗೆ ಯಾರು ಪ್ರಶ್ನೆ ಪತ್ರಿಕೆ ತಯಾರಿಸಬೇಕು ಎಂಬ ನಿರ್ಧಾರವನ್ನು ಶೈಕ್ಷಣಿಕ ವರ್ಷದ ಆರಂಭದಲ್ಲೇ ಕೈಗೊಳ್ಳಬೇಕು. ಈಗ ಪರೀಕ್ಷೆಗಳನ್ನು ಶಾಲಾ ಮಟ್ಟದಲ್ಲೇ ನಡೆಸಿದರು ಕೂಡ, ಮಂಡಳಿಯಿಂದ ಬರುವ ಪ್ರಶ್ನೆ ಪತ್ರಿಕೆಯು ಈಗಾಗಲೇ ಪರೀಕ್ಷೆ ಒತ್ತಡದಲ್ಲಿರುವ ವಿದ್ಯಾರ್ಥಿಗಳ ಮೇಲೆ ಇನ್ನಷ್ಟು ಭಾರವನ್ನುಂಟುಮಾಡುತ್ತದೆ.

ಪ್ರಸ್ತುತ ರಾಜ್ಯ ಸರ್ಕಾರವು ಶೈಕ್ಷಣಿಕ ವರ್ಷದ ನಡುವೆ ಈ ರೀತಿ ಹಲವು ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ತಜ್ಞರ ಅಭಿಪ್ರಾಯಗಳನ್ನು ಪಡೆಯದೇ ಈ ರೀತಿ ಅಪ್ರಜಾತಾಂತ್ರಿಕ ಹಾಗೂ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವುದನ್ನು ಸರ್ಕಾರವು ಕೈಬಿಡಬೇಕು. ಕೂಡಲೇ ಮಂಡಳಿ ಪ್ರಶ್ನೆ ಪತ್ರಿಕೆಗಳನ್ನು ಕೈಬಿಟ್ಟು ಶಾಲಾ ಮಟ್ಟದಲ್ಲೇ ಪ್ರಶ್ನೆ ಪತ್ರಿಕೆಗಳನ್ನು ರಚಿಸಬೇಕೆಂದು ಎಐಡಿಎಸ್‌ಓ ರಾಜ್ಯ ಸಮಿತಿಯು ಒತ್ತಾಯಿಸಿದೆ.

## ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ.5- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 9 ಮತ್ತು 10 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

# ಬಗರ್ ಹುಕುಂ ಸಾಗುವಳಿ ಪತ್ರಕ್ಕೆ ಆಗ್ರಹಿಸಿ ಮಲೇಬೆನ್ನೂರಿನಿಂದ ದಾವಣಗೆರೆವರೆಗೆ ರೈತರ ಪ್ರತಿಭಟನೆ



ಮಲೇಬೆನ್ನೂರು, ಸೆ. 5- ಬಗರ್ ಹುಕುಂ ಸಾಗುವಳಿ ಪತ್ರ ನೀಡುವಂತೆ ಒತ್ತಾಯಿಸಿ ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಗುರುವಾರ ಮಲೇಬೆನ್ನೂರಿನಿಂದ ದಾವಣಗೆರೆವರೆಗೆ ಪ್ರತಿಭಟನೆ ನಡೆಸಿ, ನಂತರ ಅಪಾರ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಹರಿಹರ, ಚನ್ನಗಿರಿ, ಹೊನ್ನಾಳಿ, ನ್ಯಾಮತಿ ಹಾಗೂ ಜಗಳೂರು ತಾಲ್ಲೂಕುಗಳಲ್ಲಿ ಕಳೆದ 25-30 ವರ್ಷಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ರೈತರಿಗೆ ತುರ್ತಾಗಿ ಹಕ್ಕು ಪತ್ರ ನೀಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುತ್ತಿರುವುದರಿಂದ ರೈತರ ಆಧಾರ್ ಜೋಡಣೆಯನ್ನು ಸರ್ಕಾರ ಕೂಡಲೇ ಕೈ ಬಿಡಬೇಕು. ದಾವಣಗೆರೆ ಜಿಲ್ಲೆಯಲ್ಲಿ ಬೆಳೆದಿರುವ ಮೆಕ್ಕೆಜೋಳವನ್ನು ಸರ್ಕಾರ ಹಾಲು ಒಕ್ಕೂಟಕ್ಕೆ ಖರೀದಿಸಬೇಕು. ಭೂಪಾನ ಇಲಾಖೆಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ರೈತರು ಅಲೆದಾಡುತ್ತಿದ್ದು, ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಆಗ್ರಹಿಸಿ, ಈ ಪ್ರತಿಭಟನೆಯನ್ನು ನಡೆಸಲಾಗುತ್ತಿದೆ ಎಂದು ರೈತ ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಜಿಲ್ಲಾ ಕಾರ್ಯಾಧ್ಯಕ್ಷ ಕೋಗಳಿ ಮಂಜುನಾಥ್ ತಿಳಿಸಿದರು.

ಮಲೇಬೆನ್ನೂರಿನ ನೀರಾವರಿ ಇಲಾಖೆ ಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ದಾವಣಗೆರೆಯ ಅಂಬೇಡ್ಕರ್ ವೃತ್ತ, ಜಯದೇವ ವೃತ್ತ ಮತ್ತು ಪಿ.ಬಿ.ರಸ್ತೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿತು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ವಕೀಲ ಮಂಜುನಾಥ್, ಹರಿಹರ ತಾ. ಅಧ್ಯಕ್ಷ ಬೆಳಕೆರೆ ಬಸಣ್ಣ, ಮಾಯಕೊಂಡ ಪ್ರತಾಪ್, ಮೀಯಾಪುರ ತಿರುಮಲೇಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಆ. 24- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲು ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಸ್ಟೇಡಿಯಂ, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

# ರಕ್ಷಾ ಬಂಧನ ಒಂದು ಹೃದಯಸ್ಪರ್ಶಿ ಆಚರಣೆ

**ಈಶ್ವರಮ್ಮ ಶಾಲೆಯ ಕಾರ್ಯಕ್ರಮದಲ್ಲಿ ರಾಜಯೋಗ ಶಿಕ್ಷಕರಾದ ಬ್ರಹ್ಮಾಕುಮಾರಿ ಸೌಮ್ಯ**



ದಾವಣಗೆರೆ, ಸೆ. 5 - ರಕ್ಷಾ ಬಂಧನ ಸೋದರ-ಸೋದರಿಯರ ಪವಿತ್ರ ಬಂಧನವನ್ನು ಸಾರುವ ಹಬ್ಬವಾಗಿದೆ. ಸಹೋದರಿಯರು ಸಹೋದರರಿಗೆ ವಿಜಯದ ವೀರ ತಿಲಕವನ್ನು ಹಚ್ಚಿ ರಕ್ಷಾ ಬಂಧನವನ್ನು ಕಟ್ಟುತ್ತಾರೆ. ಅಣ್ಣ, ತಂಗಿ, ಅಕ್ಕ-ತಮ್ಮ ಎಲ್ಲರಿಗೂ ಪರಮಾತ್ಮನ ರಕ್ಷಣೆ ಸಿಗುತ್ತದೆ ಎಂದು ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ಶಿಕ್ಷಕರಾದ ಬ್ರಹ್ಮಾಕುಮಾರಿ ಸೌಮ್ಯ ಅವರು ಹೇಳಿದರು.

ನಗರದ ಈಶ್ವರಮ್ಮ ಶಾಲೆಯ ಶ್ರೀ ಸತ್ಯಸಾಯಿ ಸಭಾಂಗಣದಲ್ಲಿ ನಡೆದ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಕ್ಷಾ ಬಂಧನ ಒಂದು ಹೃದಯ ಸ್ಪರ್ಶಿಯಾದ ಆಚರಣೆಯಾಗಿದೆ. ರಾಖಿ ಎಂದರೆ ಕಂಕಣಬದ್ಧರಾಗುವುದು. ಇದೊಂದು ಮಧುರವಾದ ಬಾಂಧವ್ಯ. ಸಿಹಿಯನ್ನು ಹಂಚಿ ಪರಮಾತ್ಮನ ಮಹಾವಾಕ್ಯಗಳನ್ನು ಆಚರಿಸಬೇಕು. ಎಲ್ಲದಕ್ಕೂ ಮುಖ್ಯ ಆಧಾರ ಅಧ್ಯಾತ್ಮಿಕತೆ, ಆದ್ದರಿಂದ ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಅಧ್ಯಾತ್ಮಿಕತೆಯನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಶಾಲಾಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಎ.ಆರ್. ಉಷಾ ರಂಗನಾಥ್ ಮಾತನಾಡಿ, ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಬಹಳ ಹಬ್ಬಗಳನ್ನು ಆಚರಿಸುತ್ತೇವೆ. ಪ್ರತಿಯೊಂದು ಹಬ್ಬಗಳ ಅರ್ಥವನ್ನು ತಿಳಿದು ಆಚರಿಸಿದಾಗ ಅದರ ಮಹತ್ವ ಹೆಚ್ಚಾಗುತ್ತದೆ. ಸಹೋದಯರಿಯರಿಗೆ ಶಕ್ತಿ ಕೊಡುವುದು, ಅಣ್ಣ-ತಮ್ಮಂದಿರ ಆತ್ಮೀಯ ಬಂಧನ. ರಕ್ಷಾ ಬಂಧನ ಒಂದು ಭಾವನಾತ್ಮಕವಾದ ಹಬ್ಬ. ರಾಖಿ ಕಟ್ಟಿದವರಷ್ಟೇ ಅಲ್ಲದೇ ಎಲ್ಲರೂ ನಮ್ಮ ಸೋದರಿಯರೆಂದೇ ತಿಳಿಯಬೇಕು ಎಂದು ಹೇಳಿದರು. ಶಾಲೆಯ 10 ನೇ ತರಗತಿಯ ವಿದ್ಯಾರ್ಥಿನಿಯರು ತಮ್ಮ ಸಹಪಾಠಿಗಳಾದ ವಿದ್ಯಾರ್ಥಿಗಳಿಗೆ ರಾಖಿ ಕಟ್ಟುವುದರ ಮೂಲಕ ಸಹೋದರ-ಸಹೋದರಿಯರಾ ದರು. ಈ ಕಾರ್ಯಕ್ರಮದಲ್ಲಿ ಶಾಲಾ ಸಹ ಶಿಕ್ಷಕಿಯಾದ ಶ್ರೀಮತಿ ಶ್ರೀದೇವಿ ಬಿ. ಅವರು ರಕ್ಷಾ ಬಂಧನದ ವಿಧಿ ವಿಧಾನಗಳನ್ನು ನೆರವೇರಿಸಿದರು.

ಶಾಲೆಯ ಪ್ರಾಂಶುಪಾಲರಾದ ಕೆ.ಎಸ್. ಪ್ರಭುಕುಮಾರ್ ಉಪಸ್ಥಿತರಿದ್ದರು.

ಶಾಲಾ ಉಪಪ್ರಾಂಶುಪಾಲರಾದ ಶ್ರೀಮತಿ ಶಶಿರೇಖಾ ಜಿ.ಎಸ್. ಪ್ರಾಸ್ತಾವಿಕ ನುಡಿಗಳನ್ನಾಡಿ, ಸ್ವಾಗತಿಸಿದರು. ಸಂಗೀತ ಶಿಕ್ಷಕಿಯಾದ ಶ್ರೀಮತಿ ವಿದ್ಯಾ ಹೆಗಡೆ ರಕ್ಷಾ ಬಂಧನ ಸಾರುವ ಗೀತೆಗಳನ್ನು ಹಾಡಿದರು. ಸಹ ಶಿಕ್ಷಕಿ ಶ್ರೀಮತಿ ರೋಹಿಣಿ ಎಂ. ವಂದಿಸಿದರು. ಶ್ರೀಮತಿ ಹೇಮಲತಾ ಕಾರ್ಯಕ್ರಮ ನಿರೂಪಿಸಿದರು.

# ಸಮಾಜಮುಖಿ ಕಾರ್ಯಗಳಲ್ಲಿ ಸಿಸ್ಟರ್ ನಿವೇದಿತಾ ಮಹಿಳಾ ಸಮಾಜ



**ದಾವಣಗೆರೆ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರಾದ ಗಾಯತ್ರಿ ದೇವರಾಜ್ ಶ್ಲಾಘನೆ**

ದಾವಣಗೆರೆ, ಸೆ.5- ಮಹಿಳಾ ಸಮಾಜದ ಸ್ತ್ರೀಯರು ಕುಟುಂಬ ನಿರ್ವಹಣೆಯ ಜತೆಗೆ ಸಮಾಜಮುಖಿ ಕಾರ್ಯದಲ್ಲಿ ತೊಡಗಿರುವುದನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರಾದ ಡಾ. ಗಾಯತ್ರಿ ದೇವರಾಜ್ ಶ್ಲಾಘಿಸಿದರು.

ಸಿಸ್ಟರ್ ನಿವೇದಿತಾ ಮಹಿಳಾ ಸಮಾಜದ ವತಿಯಿಂದ ನಗರದ ನೂತನ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ 30ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆಲವು ವರ್ಷಗಳ ಹಿಂದೆ ಮಹಿಳೆಯರು ಸಮಾಜದ ಸ್ಥಾನಮಾನಗಳಿಂದ ವಂಚಿತವಾಗಿದ್ದರು. ಆ ಕಾಲದಲ್ಲೇ ಮಹಿಳೆಯರ ಸಬಲೀಕರಣ ದೃಷ್ಟಿಯಿಂದ 'ಸಿಸ್ಟರ್ ನಿವೇದಿತಾ ಮಹಿಳಾ ಸಮಾಜ'ದ ಹಿರಿಯ ಸದಸ್ಯರು ಹೋರಾಟ ಮಾಡಿದ ಬಗೆ ಪ್ರಶಂಸನೀಯ ಎಂದರು.

ಇದೇ ವೇಳೆ ಸಮಾಜದ ಸದಸ್ಯರಾದ ಶ್ವೇತಾ ಪಾಟೀಲ್ ಅವರಿಗೆ 'ಸಾಧನಾ ಪ್ರಶಸ್ತಿ' ನೀಡಿದರು. ಸಮಾಜದ ಎಲ್ಲ ಹಿರಿಯ ಸದಸ್ಯರು ಅನಿಸಿಕೆಗಳನ್ನು ಹಂಚಿಕೊಂಡರು.

ಗೌರಮ್ಮ ವರಹದ, ವಿಮಲ ಮಲ್ಲಪ್ಪ, ಶಶಿಕಲಾ ಚಂದ್ರಮೌಳಿ, ಜಯ ಬಾಲ ರೆಡ್ಡಿ, ನಾಗರತ್ನಮ್ಮ, ಚಂದ್ರಿಕಾ ಪರಮೇಶ್ವರಪ್ಪ, ಹೇಮಾ ಕಾಳಿದಾಸ, ಸುಶೀಲಾ ಉಮೇಶ್, ಶಿವಲಿಂಗಮ್ಮ ರಂಗನಾಥ, ಕುಸುಮಾ ಲೋಕೇಶ್ವರಪ್ಪ, ಗುಣವತಿ ಭೀಮಪ್ಪ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ನಾಗರಿಕ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ವೈ.ಎಂ. ಬಸವೇಶ್, ಕಾರ್ಯದರ್ಶಿ ಅರುಣ್ ಹುನಗುಂದ, ರಾಮಾಂಜನೇಯ ವಿದ್ಯಾಸಂಸ್ಥೆ ಕಾರ್ಯದರ್ಶಿ ಟಿ. ಬಸವರಾಜ, ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಕೆ. ಶಿವಮೂರ್ತಿ, ದವನ್ ಪಿ ಯು ಕಾಲೇಜಿನ ಪ್ರಾಚಾರ್ಯೆ ಹೆಚ್.ಸಿ. ಅಶ್ವಿನಿ, ಸಿಸ್ಟರ್ ನಿವೇದಿತಾ ಮಹಿಳಾ ಸಮಾಜದ ಉಪಾಧ್ಯಕ್ಷೆ ಗುಣವತಿ ಭೀಮಪ್ಪ, ಪ್ರಧಾನ ಕಾರ್ಯದರ್ಶಿ ರೂಪಾ ಎಸ್ ಹಜಾರೆ, ಖಜಾಂಚಿ ವೀಣಾ ವೇದಮೂರ್ತಿ, ಸಹ ಕಾರ್ಯದರ್ಶಿ ಸುನೀತಾ ಶಿವಪ್ರಸಾದ್ ಮತ್ತಿತರರಿದ್ದರು.

# ಸಿಎಂ ಸಲಹೆಗಾರರಿಗೆ ಅನರ್ಹತೆಯ ಭೀತಿ

## ಅನರ್ಹತಾ ನಿವಾರಣಾ ಮಸೂದೆ ಜಾರಿಗಾಗಿ ಸರ್ಕಾರದ ಪ್ರಯತ್ನ

ಬೆಂಗಳೂರು, ಸೆ. 5 - ವಿಧಾನಮಂಡಲದ ಸದಸ್ಯರಾಗಿದ್ದುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆಗಾರರಾಗಿರುವ ಐವರು ಶಾಸಕರು ತಮ್ಮ ಸದಸ್ಯತ್ವ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಮುಖ್ಯಮಂತ್ರಿ ಅವರ ರಾಜಕೀಯ ಸಲಹೆಗಾರರಾಗಿರುವ ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್, ನಜೀರ್ ಅಹಮದ್, ಆರ್ಥಿಕ ಸಲಹೆಗಾರರಾಗಿರುವ ವಿಧಾನಸಭೆಯ ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಗಳ ಸಲಹೆಗಾರ (ನೀತಿ ಮತ್ತು ಯೋಜನಾ) ಆರ್.ವಿ. ದೇಶಪಾಂಡೆ ಮತ್ತು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ ಅವರುಗಳು ಸದಸ್ಯತ್ವ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ.

ಶಾಸಕ ಸ್ಥಾನದ ಜೊತೆಗೆ ಲಾಭದಾಯಕ ಹುದ್ದೆಯಲ್ಲಿ ಇದ್ದಾರೆ ಎಂಬ ಕಾರಣದಿಂದ ತಮ್ಮ ಸದಸ್ಯತ್ವ ಕಳೆದುಕೊಳ್ಳುವ ಸಾಧ್ಯತೆ ಇದೆ. ಇದನ್ನು ಮನಗಂಡ ರಾಜ್ಯ ಸರ್ಕಾರ, ಕಳೆದ ಬಜೆಟ್ ಅಧಿವೇಶನದಲ್ಲಿ ಇವರಿಗಾಗಿಯೇ ತಿದ್ದುಪಡಿ ಮಸೂದೆ ತಂದು ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿತ್ತು.

ಸರ್ಕಾರ ಕಳುಹಿಸಿದ ಹಲವು ಮಸೂದೆಗಳಿಗೆ ವಿವರಣೆ ಕೇಳಿ, ಹಿಂದಕ್ಕೆ ಕಳುಹಿಸಲಾಗಿದ್ದು, ಅದರಲ್ಲಿ ಈ ತಿದ್ದುಪಡಿ ಮಸೂದೆಯೂ ಸೇರಿದೆ. ರಾಜ್ಯಪಾಲರು ವಿವರಣೆ ಕೇಳಿ ಹಿಂದೆ ಕಳುಹಿಸಿರುವ ಮಸೂದೆಗಳಲ್ಲಿ ಐವರು ಶಾಸಕರ ಲಾಭದಾಯಕ ಹುದ್ದೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಉತ್ತರವನ್ನು ಬಯಸಿದೆ.

ರಾಜಭವನ ಮತ್ತು ಸರ್ಕಾರದ ನಡುವಿನ ಮುಸುಕಿನ ಗುದ್ದಾಟದ ನಡುವೆ ಈ ಮಸೂದೆಯನ್ನು ಹಿಂದಕ್ಕೆ ಕಳುಹಿಸಿರುವುದು ಮುಖ್ಯಮಂತ್ರಿ ಅವರಿಗೆ ಆಘಾತ ಉಂಟು ಮಾಡಿದೆ.

ಇದರ ಗಾಂಭೀರ್ಯತೆಯನ್ನು ಅರಿತ ಮುಖ್ಯಮಂತ್ರಿ ಅವರು, ರಾಜ್ಯಪಾಲರು ಹಿಂದಕ್ಕೆ ಕಳುಹಿಸಿರುವ ಮಸೂದೆಗಳ ಪೈಕಿ ಲಾಭದಾಯಕ ಹುದ್ದೆ ಪ್ರಶ್ನಿತ ತಿದ್ದುಪಡಿ ಮಸೂದೆಯನ್ನು ಇಂದು ನಡೆದ ಸಚಿವ ಸಂಪುಟ ಸಭೆಯ ಮುಂದಿಟ್ಟು ಸುದೀರ್ಘ ಚರ್ಚೆ ನಡೆಸಿದರು.

ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ 2024ಕ್ಕೆ ಅನುಮತಿ ನೀಡುವಂತೆ ರಾಜ್ಯಪಾಲರಿಗೆ ಕಡತವನ್ನು ಮತ್ತೆ ಕಳುಹಿಸಿಕೊಡಲು ಸಭೆ ತೀರ್ಮಾನಿಸಿತು.

ರಾಜಭವನ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಕೇಳಿರುವ ವಿವರಣೆಗಳಿಗೆ ಕಾನೂನು ತಜ್ಞರ ಸಲಹೆ ಪಡೆದು, ಟಿಪ್ಪಣಿ ಸಿದ್ಧಪಡಿಸಿ ಕಳುಹಿಸಲಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

# ಮೂರನೇ ಬಾರಿಗೆ ತೈಲ ಬೆಲೆ ಏರಿಸಿದ ಮಾನ್ ಸರ್ಕಾರ

ಚಂಡೀಘಡ, ಸೆ. 5 - ಪಂಜಾಬ್ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಹೆಚ್ಚಿಸಿದೆ. ಭಗವಂತ ಮಾನ್ ನೇತೃತ್ವದ ಆಮ್ ಆದ್ಮಿ ಪಾರ್ಟಿ ಸರ್ಕಾರ ಪಂಜಾಬ್‌ನಲ್ಲಿ ಅಧಿಕಾರಕ್ಕೆ ಬಂದ ನಂತರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಮೂರನೇ ಬಾರಿ ಹೆಚ್ಚಿಸಲಾಗಿದೆ.

ಪೆಟ್ರೋಲ್ ತೆರಿಗೆಯನ್ನು 61 ಪೈಸೆ ಹಾಗೂ ಡೀಸೆಲ್ ತೆರಿಗೆಯನ್ನು 92 ಪೈಸೆ ಹೆಚ್ಚಿಸಲಾಗಿದೆ. ಪ್ರಸಕ್ತ ಮೊಹಾಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 97 ರೂ. ಹಾಗೂ ಡೀಸೆಲ್ ಬೆಲೆ 87.21 ರೂ. ಆಗಿದೆ.

ಚಂಡೀಘಡಕ್ಕೆ ಹೋಲಿಸಿದರೆ ಪಂಜಾಬ್‌ನಲ್ಲಿ ತೈಲಬೆಲೆ ಈಗಾಗಲೇ ಹೆಚ್ಚಾಗಿದೆ. ಚಂಡೀಘಡದಲ್ಲಿ ಪೆಟ್ರೋಲ್ ಬೆಲೆ 94.24 ರೂ. ಹಾಗೂ ಡೀಸೆಲ್ ಬೆಲೆ 82.40 ರೂ. ಆಗಿದೆ.

ಪೆಟ್ರೋಲ್ ಪಂಪ್ ಮಾಲೀಕರು ಬೆಲೆ ಏರಿಕೆ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಪಕ್ಕದ ರಾಜ್ಯಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಕಡಿಮೆ ಇರುವುದರಿಂದ ಗಡಿ ಭಾಗದಲ್ಲಿರುವ ಗ್ರಾಹಕರು ಪಕ್ಕದ ರಾಜ್ಯದಲ್ಲಿ ಪೆಟ್ರೋಲ್ ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.

## ಶಸಾಪ ಯುವ ಘಟಕದ ಜಿಲ್ಲಾ ಸಂಚಾಲಕರಾಗಿ ಶಿವರಾಜ್ ಕಬ್ಬೂರು



ದಾವಣಗೆರೆ, ಸೆ. 5- ಶರಣ ಸಾಹಿತ್ಯ ಪರಿಷತ್ತಿನ ಸಂಘಟನೆ, ಪ್ರಸಾರ ಮತ್ತು ಪ್ರಚಾರ ಕಾರ್ಯಕ್ಕಾಗಿ ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಯುವ ಘಟಕದ ಸಂಚಾಲಕರನ್ನಾಗಿ ಕೆ.ಸಿ. ಶಿವರಾಜ್ ಕಬ್ಬೂರ್ ಅವರನ್ನು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅವರು ನೇಮಕ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಸಿ. ಗಾಂಜಿ, ರಾಜ್ಯ ಕದಳಿ ಉಪ ಸಂಚಾಲಕರಾದ ಪ್ರಮೀಳಾ ನಟರಾಜ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಮತ್ತು ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ ವಸ್ತ್ರದ್ ಉಪಸ್ಥಿತರಿದ್ದರು.

## ಗುಂಡಿನ ಚಕಮಕಿಯಲ್ಲಿ 6 ಮಾವೋಗಳು ಹತ

ಹೈದರಾಬಾದ್, ಸೆ. 5 - ತೆಲಂಗಾಣದ ಭದ್ರಾದ್ರಿ ಕೊತಗುಡೆಂ ಜಿಲ್ಲೆಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ 6 ಮಾವೋ ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊತೆ ಎಂಬ ಹಳ್ಳಿಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ತೆಲಂಗಾಣದ ನಕ್ಸಲ್ ನಿಗ್ರಹ ದಳವಾದ ಗ್ರೇಹೌಂಡ್ಸ್‌ನ ಇಬ್ಬರು ಕಮಾಂಡೋಗಳು ಗಾಯಗೊಂಡಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಬೆಳಗ್ಗೆ 6.45 ಸಮಯದಲ್ಲಿ ಮಾವೋಗಳು ಪೊಲೀಸರ ಮೇಲೆ ಗುಂಡು ಹಾರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಪೊಲೀಸರು ಸಹ ಗುಂಡು ಹಾರಿಸಿದ್ದಾರೆ.

## ಗ್ರಂಥಾಲಯಕ್ಕೆ ಪುಸ್ತಕ ನೀಡಿ

ದಾವಣಗೆರೆ, ಸೆ.5 - ಜಿಲ್ಲಾ, ನಗರ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಉಪಯೋಗಕ್ಕಾಗಿ ದಾನದ ರೂಪದಲ್ಲಿ ಸಾರ್ವಜನಿಕರು ತಾವು ಓದಿದ ಉತ್ತಮ ಪುಸ್ತಕಗಳನ್ನು ಇದೇ ದಿನಾಂಕ 12 ರೊಳಗಾಗಿ ದೇಣಿಗೆ ರೂಪದಲ್ಲಿ ಉಚಿತವಾಗಿ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮುಖ್ಯ ಗ್ರಂಥಾಲಯಾಧಿಕಾರಿ ಪಿ.ಆರ್. ತಿಪ್ಪೇಸ್ವಾಮಿ, ಮೊ.ಸಂ 8722313666 ಕ್ಕೆ ಸಂಪರ್ಕಿಸಲು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ತಿಳಿಸಿದ್ದಾರೆ.

# ಹರಿಹರ ಮರ್ಚೆಂಟ್ ಸಹಕಾರಿಗೆ 14.77 ಲಕ್ಷ ರೂ. ಲಾಭ



ಹರಿಹರ, ಸೆ, 5- ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘವು 2023-24 ನೇ ಸಾಲಿನಲ್ಲಿ 14.77 ಲಕ್ಷ ರೂಪಾಯಿ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಎಂ ನಾಗರಾಜ್ ತಿಳಿಸಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಜರುಗಿದ ಸಂಘದ 10ನೇ ವಾರ್ಷಿಕ ಮಹಾಸಭೆಯ ಅಧ್ಯ ಕ್ಷತೆ ವಹಿಸಿ ಅವರು ಮಾತನಾಡಿದರು.

ಮರ್ಚೆಂಟ್ಸ್ ಸೌಹರ್ದವು 802 ಷೇರುದಾರರನ್ನು ಹೊಂದಿದ್ದು, ಈ ಬಾರಿ 2.59 ಕೋಟಿ ರೂಪಾಯಿ ಠೇವಣಿ ಸಂಗ್ರಹವಾಗಿದೆ. ಕಳೆದ ಸಾಲಿಗಿಂತ 33.59 ಲಕ್ಷ ರೂಪಾಯಿ ಠೇವಣಿ ಮೊತ್ತ ಹೆಚ್ಚಿಗೆ ಆಗಿರುತ್ತದೆ. 2.64 ಕೋಟಿ ರೂಪಾಯಿ ಸಾಲವನ್ನು ನೀಡಲಾಗಿದ್ದು, ಇದು ಕಳೆದ ಸಾಲಿಗಿಂತ 43.96 ಲಕ್ಷ ರೂ. ಹೆಚ್ಚಳವಾಗಿದೆ. ಜೊತೆಗೆ ಡಿ.ಡಿ.ಸಿ.ಸಿ., ಆಕ್ಸಿಸ್, ಉಜ್ಜೀವನ್, ಸ್ಮಾಲ್ ಫೈನಾನ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಒಕ್ಕೂಟ, ಕರ್ನಾಟಕ ಸೌಹಾರ್ದ ಅಸೋಸಿಯೇಷನ್‌ಗಳಲ್ಲಿ 78.12 ಲಕ್ಷ ರೂಪಾಯಿ ಹೂಡಿಕೆ ಮಾಡಲಾಗಿದೆ ಎಂದರು.

ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ರುದ್ರಯ್ಯ ಕಳ್ಳಿಮಠ ಓದಿದರು. ಉಪಾಧ್ಯಕ್ಷ ಡಾ. ಪ್ರವೀಣ್ ಹೆಗಡೆ, ನಿರ್ದೇಶಕರಾದ ಜಿ.ಕೆ. ವೀರಣ್ಣ, ಜಿ. ನಂಜಪ್ಪ, ಹೆಚ್.ವಿ ಸುಜಯ್, ರಾಘವೇಂದ್ರ ಬೊಂಗಾಳೆ, ಡಾ. ಎನ್. ಸೀಮಾ, ಸುನೀತಾ ಪಿ. ಬದ್ದಿ, ಜಿ.ಕೆ. ನಾಗರತ್ನ, ಮಂಜುಳಾ ಪ್ರಸಾದ್, ಗಣ್ಯ ವ್ಯಕ್ತಿಗಳಾದ ಟಿ.ಜೆ. ಮುರುಗೇಶಪ್ಪ, ಶ್ರೀನಿವಾಸ್ ಮೂರ್ತಿ, ಹೆಚ್. ವಿ. ಸಂಜಯ್, ರಾಮಚಂದ್ರ ಶೆಟ್ಟಿ, ಪರಶುರಾಮ್ ಬದ್ದಿ, ಸಿಬ್ಬಂದಿಗಳಾದ ಬೀರಪ್ಪ ಎಸ್. ಕಮತರ್, ಕ್ಯಾಷಿಯರ್ ವಿ. ಎಸ್. ಜಯಲಕ್ಷ್ಮಿ, ಪಿಗ್ಮಿ ಸಂಗ್ರಾಹಕರಾದ ಪಿ.ಎಸ್. ಕರಿಬಸಪ್ಪ, ಎನ್.ಎಸ್. ವೀರೇಶ್, ಪರಶುರಾಮ್ ಪವಾರ್, ಎಸ್.ಬಿ. ಕುಂಚೂರು, ರಾಘವೇಂದ್ರ ಇತರರು ಹಾಜರಿದ್ದರು.

ಸುಚೇತಾ ಸುಜಯ್ ಪ್ರಾರ್ಥಿಸಿ ದರು. ಹೆಚ್.ಎಸ್. ಮಂಜುನಾಥ್ ಸ್ವಾಗತಿಸಿದರು. ಮಯೂರ್ ಹೆಚ್.ಎನ್ ವಂದಿಸಿದರು. ರಾಜಶೇಖರಯ್ಯ ನಿರೂಪಿಸಿದರು.

ಈ ವೇಳೆ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದಂತಹ ಸದಸ್ಯರ ಮಕ್ಕಳಾದ ಶಾಂಭವಿ ಮಂಜುನಾಥ್, ಮಲ್ಲಿಕಾ ಹಂಚಿನಾಳ ಮಂಜುನಾಥ್, ಶ್ರೀಲಕ್ಷ್ಮಿ ಜ್ಞಾನೇಶ್ವರ ಕೆ. ಎನ್., ಭರತ್ ಹನುಮಂತಪ್ಪ, ಸಹಾನ ಪಿ.ಕೆ. ಕರಿಬಸಪ್ಪ, ನಿಕಿತ್ ಆರ್. ರಾಘವೇಂದ್ರ, ಬೊಂಗಾಳೆ ರವರಿಗೆ ಸೌಹಾರ್ದದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

## ರಾಯಚೂರು ಬಳಿ ಶಾಲಾ ವಾಹನ-ಬಸ್ ಡಿಕ್ಕಿ: ಇಬ್ಬರು ಮಕ್ಕಳ ಸಾವು



ಮಾನ್ವಿ (ರಾಯಚೂರು), ಸೆ.5- ಶಾಲಾ ವಾಹನ ಹಾಗೂ ಸಾರಿಗೆ ಸಂಸ್ಥೆಯ ಬಸ್ ಮುಖಾಮುಖಿ ಡಿಕ್ಕಿಯಾಗಿ ಶಾಲಾ ವಾಹನದಲ್ಲಿದ್ದ ಇಬ್ಬರು ಮಕ್ಕಳು ಮೃತಪಟ್ಟು, 15 ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡ ಘಟನೆ ತಾಲ್ಲೂಕಿನ ಕಪಗಲ್ ಗ್ರಾಮದ ಸಮೀಪ ಗುರುವಾರ ಸಂಭವಿಸಿದೆ.

ಲೋಯಲ್ ಶಾಲೆಯ ವಿದ್ಯಾರ್ಥಿಗಳಾದ ಸಮರ್ಥ ಅಮರೇಶ (7) ಹಾಗೂ ಶ್ರೀಕಾಂತ ಮಾರೇಶ (12) ಮೃತಪಟ್ಟಿದ್ದಾರೆ. ಒಬ್ಬ ಬಾಲಕ ಹಾಗೂ ಚಾಲನಕನ ಸ್ಥಿತಿ ಗಂಭೀರವಾಗಿದೆ. ಭೀಕರ ಅಪಘಾತದಲ್ಲಿ ಮೂರು ಮಕ್ಕಳ ಕಾಲುಗಳು ತುಂಡಾಗಿವೆ.

ಶಾಲಾ ಮಕ್ಕಳನ್ನು ಕರೆದುಕೊಂಡು ಮಾನ್ವಿಯ ಲೋಯಲ್ ಶಾಲೆಗೆ ತೆರಳುತ್ತಿದ್ದ ವಾಹನಕ್ಕೆ ಮಾನ್ವಿ ಪಟ್ಟಣದಿಂದ ರಾಯಚೂರು ಕಡೆಗೆ ತೆರಳುತ್ತಿದ್ದ ಸಾರಿಗೆ ಸಂಸ್ಥೆಯ ಬಸ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಮೂವರು ಮಕ್ಕಳನ್ನು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಮಕ್ಕಳ ಪಾಲಕರಿಗೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು. ರಸ್ತೆ ಸಾರಿಗೆ ಸಂಸ್ಥೆಯಿಂದಲೂ ಪರಿಹಾರ ಕೊಡುವ ಭರವಸೆ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೀಶ್ ತಿಳಿಸಿದ್ದಾರೆ.

## ಚೀಟಿ ಸಂಸ್ಥೆಯಿಂದ ಮೋಸ ಹೋಗದಿರಿ

ದಾವಣಗೆರೆ, ಸೆ.5- ಸಾರ್ವಜನಿಕರು ಅನಧಿಕೃತ ಚೀಟಿ ಸಂಸ್ಥೆ ಅಥವಾ ವ್ಯಕ್ತಿಗಳೊಂದಿಗೆ ವ್ಯವಹರಿಸಿ ಮೋಸ ಹೋಗಬಾರದು ಎಂದು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕ ಮಧು ಶ್ರೀನಿವಾಸ್ ಟಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಅನಧಿಕೃತ ಚೀಟಿ ಸಂಸ್ಥೆಗಳು ಗ್ರಾಹಕರಿಗೆ ಮೋಸ ಮಾಡಿದ ಪ್ರಕರಣಗಳ ಸಂಖ್ಯೆ ಅಧಿಕವಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು, ಚೀಟಿ ಸಂಸ್ಥೆ ಅಧಿಕೃತವಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊಂಡು ವ್ಯವಹರಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ಹಿಂಡಸಘಟ್ಟ : ಅರುಣ್ ಕುಮಾರ್‌ಗೆ ಉತ್ತಮ ಶಿಕ್ಷಕ ರಾಜ್ಯ ಪ್ರಶಸ್ತಿ ಪ್ರದಾನ



ಬೆಂಗಳೂರು, ಸೆ.5- ಬೆಂಗಳೂರಿನ ವಿಧಾನ ಸೌಧದ ಬ್ಯಾಕ್ವೆಂಟ್ ಹಾಲ್‌ನಲ್ಲಿ ಗುರುವಾರ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹರಿಹರ ತಾಲ್ಲೂಕಿನ ಹಿಂಡಸಘಟ್ಟ ಕ್ಯಾಂಪ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಬಿ.ಅರುಣ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಶಾಸಕರಾದ ಬಿ.ಪಿ. ಹರೀಶ್, ಕೋನರೆಡ್ಡಿ, ರಿಜ್ವಾನ್ ಹರ್ಷದ್, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಡಿ. ಟಿ.ಶ್ರೀನಿವಾಸ್, ಗೋವಿಂದರಾಜ್ ಸೇರಿದಂತೆ ಉನ್ನತ ಅಧಿಕಾರಿಗಳು ಈ ವೇಳೆ ಹಾಜರಿದ್ದು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ 20 ಜನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು 10 ಪ್ರೌಢ ಶಾಲಾ ಶಿಕ್ಷಕರಿಗೆ ಹಾಗೂ ಒಬ್ಬರು ಪ್ರೌಢ ಶಾಲಾ ವಿಭಾಗದ ವಿಶೇಷ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.




ನೀರಿನ ಮಟ್ಟ : 183 ಅಡಿ 5 ಇಂಚು
ಒಳ ಹರಿವು : 8931 ಕ್ಯೂಸೆಕ್ಸ್
ಹೊರ ಹರಿವು : 7750 ಕ್ಯೂಸೆಕ್ಸ್
ಕಳೆದ ವರ್ಷ : 163 ಅಡಿ






|| ಓಂ ನಮೋ ನಾರಾಯಣಾಯ ||

## ಸವಿನೆನಪು



ನಿಧನ : 06.09.1994

ದಿ|| ಶ್ರೀ ಮತಿ ದೇವಮ್ಮ ಮತ್ತು ದಿ|| ಶ್ರೀ ಕರಿಬಸವಪ್ಪ ಕ್ಯಾದಿಗೆ ಇವರ ಪುತ್ರಿ ಶ್ರೀ ಎನ್.ಜಿ. ಲಕ್ಷ್ಮಣ್ ನೀಲಗುಂದ ಇವರ ಧರ್ಮಪತ್ನಿ

**ದಿ|| ಎನ್.ಎಲ್. ಶಾಂತ ನೀಲಗುಂದ**

ನೀವು ನಮ್ಮನ್ನಗಲಿ ಇಂದಿಗೆ 30 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆದರ್ಶಗಳನ್ನು ಪಾಲಿಸುತ್ತಿರುವ...


- ಶ್ರೀಮತಿ ಸುನೀತ ಮತ್ತು ಶ್ರೀ ಲಕ್ಷ್ಮಣ್ ಎನ್.ಜಿ
- ಶ್ರೀಮತಿ ಅಶ್ವಿನಿ ಮತ್ತು ಶ್ರೀ ಶ್ರೀನಿವಾಸ ಕೆ.
- ಶ್ರೀಮತಿ ದಿವ್ಯ ಮತ್ತು ಶ್ರೀ ಆಶಿಕ್ ಎನ್.ಎಲ್.
- ಶ್ರೀ ಅಮೃತ್ ಎನ್.ಎಲ್ ಮತ್ತು ಶ್ರೀ ಅಕ್ಷತ್ ಎನ್.ಎಲ್.
- ಶ್ರೀ ವಿಠ್ಠಲ್‌ರಾಜ್ ಕೆ. ಮತ್ತು ದಿ|| ರವಿಕುಮಾರ್ ಕೆ. ಹಾಗೂ ಕುಟುಂಬ
- ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಶ್ರೀರಾಮ ಜನರಲ್ ಮರ್ಚೆಂಟ್ಸ್, MARKNDEV REALTY
ಶ್ರೀನಿವಾಸ ಮೆಡಿಕಲ್ಸ್, ನೀಲಗುಂದ ಅಂಡ್ ಸನ್ಸ್
#2738, 4ನೇ ಕ್ರಾಸ್, 2ನೇ ಮೇನ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ. ಮೊ. : 97438 14153


ಶಶಿ ಎಜುಕೇಶನ್ ಟ್ರಸ್ಟ್(ರಿ)

"ಲಲಿತಾ ಕೇರ್ ಟೇಕಿಂಗ್"

ಲೋಕಿಕೆರೆ ಮುಖ್ಯ ರಸ್ತೆ, ದಾವಣಗೆರೆ – 577 005.



ಸಂಸ್ಥೆಯ ಪರವಾನಗಿ ಸಂಖ್ಯೆ: TRL00517 / 1512002028 / 24-25

1. ಲಲಿತಾ ಕೇರ್ ಟೇಕಿಂಗ್ ಸಂಸ್ಥೆಯು 40 ವರ್ಷ ಮೇಲ್ಪಟ್ಟ ಕೌಟುಂಬಿಕ ಪುರುಷ ಅಥವಾ ಮಹಿಳೆಯರು ಖಾಸಗಿ ವೈಯಕ್ತಿಕ ಜೀವನ ನಡೆಸಲು ಬಯಸಿ ಬಂದವರಿಗೆ ಆದ್ಯತೆ ನೀಡಲಾಗುವುದು.
2. ರುಚಿಕರ ಊಟ ಮತ್ತು ಸುಸಜ್ಜಿತ ವಸತಿಯನ್ನು ಕಲ್ಪಿಸಿ ಆರೈಕೆ ಮಾಡಲಾಗುತ್ತದೆ.
3. ಆರೈಕೆ ಕೇಂದ್ರದ ಊಟ ಮತ್ತು ವಸತಿಯ ಖರ್ಚನ್ನು ಆ ವ್ಯಕ್ತಿಯೇ ಮೂರು ತಿಂಗಳು, ಆರು ತಿಂಗಳು ಅಥವಾ ವಾರ್ಷಿಕ ರೂಪದಲ್ಲಿ ಹಣವನ್ನು ಸಂದಾಯ ಮಾಡಬಹುದಾಗಿರುತ್ತದೆ.
4. ಆರೈಕೆ ಕೇಂದ್ರಕ್ಕೆ ಪ್ರತಿನಿತ್ಯ ವೈದ್ಯರು ಮತ್ತು ಶುಶ್ರೂಷಕಿಯರು ಭೇಟಿ ನೀಡುತ್ತಾರೆ.
5. ಆರೈಕೆ ಕೇಂದ್ರಕ್ಕೆ ಸೇರುವ ಇಚ್ಛೆಯಿದ್ದಲ್ಲಿ ಒಂದು ತಿಂಗಳ ಮುಂಗಡ ಹಣವನ್ನು ಅರ್ಜಿಯೊಂದಿಗೆ ಪಾವತಿಸತಕ್ಕದ್ದಾಗಿರುತ್ತದೆ.
6. ಆರೈಕೆ ಕೇಂದ್ರಕ್ಕೆ ಸೇರ ಬಯಸುವವರು ಈ ಕೆಳಗಿನ ಮೂಲ ದಾಖಲೆಗಳೊಂದಿಗೆ ಕಛೇರಿಗೆ ಭೇಟಿ ನೀಡಿ. 1. ಆಧಾರ ಕಾರ್ಡ್ 2. ವಿಳಾಸ ದೃಢೀಕರಣ ಪತ್ರ

ವಿಳಾಸ: ಲೋಕಿಕೆರೆ ಮುಖ್ಯ ರಸ್ತೆ, ದಾವಣಗೆರೆ – 577 005.

ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಿರಿ:

Contact: 9686551303 / 99806 29965


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas